ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in
RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ - 15 ಮೇ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-13 ಸಂಚಿಕೆ-5 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.

# ಉದಯಾದ್ರಿಯಲ್ಲಿ ಬ್ರಹ್ಮ ಕುಂಭಾಭಿಷೇಕ ಸಂಪನ್ನ

**ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪರಮಾಶೀರ್ವಾದಗಳಿಂದ ಪಡುಬಿದ್ರೆಯ ಉದಯಾದ್ರಿ ಶ್ರೀ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ದಿನಾಂಕ 01-05-2013 ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ದಿನಾಂಕ 03-05-2013 ರಂದು ಬ್ರಹ್ಮ ಕುಂಭಾಭಿಷೇಕವು ಸಂಪನ್ನಗೊಂಡಿತು.**


ದಿನಾಂಕ 01-05-2013 ರಂದು ಶ್ರೀ ದೇವತಾ ಪ್ರಾರ್ಥನೆಯೊಂದಿಗೆ ರಾಕ್ಷೋಘ್ನ ಹೋಮ,ವಾಸ್ತು-ಪೂಜಾ-ಬಲಿ-ಹೋಮಗಳು ನೆರವೇರಿದರೆ,ದಿನಾಂಕ 02-05-2013ರಂದು ಮಹಾಗಣಪತಿ ಹೋಮ, ನವಗ್ರಹ ಹೋಮ,ಮೃತ್ಯುಂಜಯ ಹೋಮಗಳ ಜೊತೆ ಬಿಂಬ ಶುದ್ಧಿ, ತತ್ತ್ವಹೋಮ, ಅಧಿವಾಸ ಹೋಮ, ಮಹಾಬಲಿಪೀಠ ಪ್ರತಿಷ್ಠೆ ನೆರವೇರಿತು. ದಿನಾಂಕ 03-05-2013ರಂದು ಬೆಳಗ್ಗೆ 7.45ರ ವೃಷಭಲಗ್ನದಲ್ಲಿ ಬ್ರಹ್ಮಕುಂಭಾಬಿಷೇಕ ನಡೆದು , ಸಹಸ್ರ ಮೋದಕಹವನ ನೆರವೇರಿತು. ಪ್ರತಿದಿನ ಅನ್ನ ಸಂತರ್ಪಣೆಯೊಂದಿಗೆ ಈ ಧಾರ್ಮಿಕ ವಿಧಿಗಳು ನೆರವೇರಿ ಬ್ರಹ್ಮಕುಂಭಾಭಿಷೇಕ ದಂದು ಮಹಾ ಅನ್ನಸಂತರ್ಪಣೆಯೂ ನಡೆಯಿತು. ಹಾಗೆಯೇ ದೇವಳದಲ್ಲಿ ರಚಿಸಲಾದ ನೂತನ ರಚನೆಗಳನ್ನು ಶ್ರೀ ದೇವರಿಗೆ ಸಮರ್ಪಿಸಲಾಯಿತು.

**ಪ್ರೇರಣೆ**

ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಂಘವು ಅಲ್ಲಿಯ ಪರಿಸರದಲ್ಲಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಉತ್ತಮ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದು, ಸಾಮಾಜಿಕವಾಗಿ ಇನ್ನೂ ಉನ್ನತಿಗೇರುವ ಚಿಂತನೆಯೊಂದಿಗೆ ಸಭಾಭವನವೊಂದನ್ನು ನಿರ್ಮಿಸಬೇಕೆಂದು ಯೋಚಿಸಿ, ಸ್ಥಳ ಹುಡುಕಾಟವನ್ನು ಮಾಡುತ್ತಿರುವಾಗ ,ಸ್ಥಾನಿಕ



ಬಾಲ ಗಣಪತಿ



ಪ್ರಧಾನ ಬಲಿಪೀಠ ಪ್ರತಿಷ್ಠೆ

ಸಮಾಜದ ಅಭಿವೃದ್ಧಿ ಹಾಗೂ ಒಗ್ಗಟ್ಟಿಗಾಗಿ ಸದಾ ಚಿಂತನೆಯಲ್ಲಿರುವ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳವರು "ಉದಯಾದ್ರಿಯಲ್ಲಿಯೇ ಸಾಕಷ್ಟು ಸ್ಥಳಾವಕಾಶವಿದೆ. ದೇವಳದ ಅಭಿವೃದ್ಧಿಯ ದೃಷ್ಟಿಯಿಂದಲೂ ಅಲ್ಲಿಯೇ ಸಭಾಭವನ ನಿರ್ಮಿಸುವುದು ಒಳಿತು. ಆದರೂ ಮೊದಲು ದೇವಳದ ಸುತ್ತು ಪೌಳಿ ಮೊದಲಾದುವುಗಳನ್ನು ಅಭಿವೃದ್ಧಿ ಪಡಿಸಿರಿ" ಎಂದು ಪ್ರೇರಣೆ ನೀಡಿದರು. ಅವರ ಮಾತಿನಂತೆ ಉದಯಾದ್ರಿಯಲ್ಲಿ 2008ರಲ್ಲಿ ಗರ್ಭಗುಡಿ,ತೀರ್ಥಮಂಟಪ ನಿರ್ಮಿಸಿ ಶ್ರೀ ದೇವರ ಪ್ರತಿಷ್ಠೆ -ಬ್ರಹ್ಮಕುಂಭಾಭಿಷೇಕ ನಡೆಸಿಕೊಟ್ಟ ಜೀರ್ಣೋದ್ಧಾರ ಸಮಿತಿಯೊಂದಿಗೆ ಸಮಾಲೋಚನೆ ಮಾಡಲಾಯಿತು. ಸಮಿತಿಯಲ್ಲಿ ಗೌರವಾಧ್ಯಕ್ಷರಾಗಿ ಹುಣಸೂರಿನಲ್ಲಿ ಉದ್ಯಮಿಯಾಗಿದ್ದು ಶ್ರೀ ಮಾಧವ ವಿದ್ಯಾ ಸಂಸ್ಥೆಗಳ ವ್ಯವಸ್ಥಾಪಕರಾಗಿರುವ ಶ್ರೀ ರಘುವೀರರಾಯರು,ಅಧ್ಯಕ್ಷರಾಗಿ ಕರ್ನಾಟಕ ಬ್ಯಾಂಕಿನ ಡೆಪ್ಯೂಟಿ ಜನರಲ್ ಮೆನೇಜರ್ ಶ್ರೀ ಬೊಕ್ಕಸ ಚಂದ್ರಶೇಖರ್‌ರಾವ್ ಹಾಗೂ ಕ್ರಿಯಾಶೀಲ ಕಾರ್ಯದರ್ಶಿಯಾಗಿ ಶ್ರೀ ಕರುಣ್‌ರಾವ್ ಬೆಳ್ಳೆ ಅಲ್ಲದೆ ಸಮಾಜದ ಬೇರೆ ಬೇರೆ ಸಂಘಟನೆಗಳ ಪದಾಧಿಕಾರಿಗಳನ್ನು ಸೇರಿಸಿಕೊಳ್ಳಲಾಯಿತು.

**ನೂತನ ರಚನೆಗಳು**

ಸಮಿತಿಯು ವಾಸ್ತು ತಜ್ಞರೊಡನೆ ಸಮಾಲೋಚನೆ ಮಾಡಿ ನೂತನ ಸುತ್ತುಪೌಳಿ,ಬಾವಿ, ತುಳಸೀಕಟ್ಟೆ, ಒಳಾಂಗಣಕ್ಕೆ ಶಿಲಾ ಹೊದಿಕೆ, ಪ್ರಧಾನ ಬಲಿಪೀಠ, ಉಳಿದ ಬಲಿಶಿಲೆಗಳು, ಇಂಟರ್‌ಲಾಕ್ ಹಾಸು ಹೊದಿಕೆ ಮೊದಲಾದುವುಗಳನ್ನು ರಚಿಸಬೇಕೆಂದು ತೀರ್ಮಾನಿಸಿ ಸಂಪನ್ಮೂಲ ಸಂಗ್ರಹಿಸಲು ತೊಡಗಿತು. ಬೇರೆ ಬೇರೆ ದಾನಿಗಳು, ಸಂಘ-ಸಂಸ್ಥೆಗಳು ಹಾಗೂ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿಯ ಸಹಕಾರದಿಂದ ಈ ನೂತನ ರಚನೆಗಳನ್ನು ನಿರ್ಮಿಸುವಲ್ಲಿ

(3ನೇ ಪುಟಕ್ಕೆ...)

# ಸಮುದಾಯ ಸಂರಕ್ಷಣೆ, ಸಮಾಜ ಹಿತಚಿಂತನೆ

## ಬ್ರಾಹ್ಮಣ ಜಾಗೃತಿ ಸಮ್ಮೇಳನದಲ್ಲಿ ಪೇಜಾವರ ಶ್ರೀ ಆಶಯ



ಸಮುದಾಯದ ಸಂರಕ್ಷಣೆ ಜತೆಗೆ ಸಮಸ್ತ ಮಾನವ ಜೀವಿಯ ಹಿತಚಿಂತನೆಯ ಧ್ಯೇಯದೊಂದಿಗೆ ಸಂಘಟಿತರಾಗುವ ನಿಟ್ಟಿನಲ್ಲಿ ಬ್ರಾಹ್ಮಣ ಜಾಗೃತಿ ಸಮ್ಮೇಳನ ಪೂರಕ ಎಂದು ಉಡುಪಿ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಹೇಳಿದರು. ಬ್ರಾಹ್ಮಣರ ಒಕ್ಕೂಟದ ಆಶ್ರಯದಲ್ಲಿ ನಗರದ ಸಂಘನಿಕೇತನದಲ್ಲಿ ರವಿವಾರ ಆಯೋಜಿಸಿದ್ದ ಬ್ರಾಹ್ಮಣ ಜಾಗೃತಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ನಮ್ಮ ಅಮೂಲ್ಯ ಸಂಸ್ಕೃತಿಯನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡು ಸಂರಕ್ಷಿಸುವ ನಿಟ್ಟಿನಲ್ಲಿ ಬ್ರಾಹ್ಮಣ ಸಮುದಾಯ ಸಂಘಟಿತವಾಗಿ. ಜತೆಗೆ ಸನಾತನ ಸಂಸ್ಕೃತಿ,ವೈದಿಕ ಧರ್ಮದ ರಕ್ಷಣೆ ಹಾಗೂ ಎಲ್ಲ ಸಮಾಜದ ಹಿತ ಕಾಯುವ ಬದ್ಧತೆಯನ್ನು ಬ್ರಾಹ್ಮಣ ಸಮಾಜ ಹೊಂದಿದೆ ಎಂದು ಅವರು ಹೇಳಿದರು. ಬ್ರಾಹ್ಮಣ ಸಮಾಜ

(4ನೇ ಪುಟಕ್ಕೆ...)

# ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಶ್ರೀ ದುರ್ಗಾನಮಸ್ಕಾರ ಪೂಜೆ

ತಾ.19-4-2013ನೇ ಶುಕ್ರವಾರ ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಸಂಪನ್ನಗೊಂಡಿತು. ಸಂಜೆ ಗಂಟೆ 5-00ರಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಮತ್ತು ಕಿಗ್ಗ ನಾಗಭೂಷಣ ಶಾಸ್ತ್ರಿಗಳ ನೇತೃತ್ವದಲ್ಲಿ ದೀಪವಿಟ್ಟು, ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ಕರ್ತೃಗಳಾಗಿ ಸಂಘದ ನಿರ್ದೇಶಕರಾದ ಶ್ರೀ ಟಿ. ಜಗದೀಶ ರಾವ್ ದಂಪತಿಗಳು ಸಹಕರಿಸಿದರು. ನಮ್ಮ ಸಮಾಜದ ಸ್ವಾಧ್ಯಾಯ ತಂಡದವರಿಂದ ದುರ್ಗಾ ಸಪ್ತಶತೀ ಪಾರಾಯಣ ನಡೆಯಿತು. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ ನಡೆದವು.

ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8-00 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸೇವೆಯ ಧನ್ಯತೆಯನ್ನು ಪಡೆದರು.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು ಮತ್ತು ಸುದ್ದಿಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

## ಚಿಂತನ

ಭಾರತ ಸ್ವತಂತ್ರಗೊಂಡು 60 ವರ್ಷಗಳು ದಾಟಿವೆ. ಇಲ್ಲಿಯವರೆಗೂ ಪ್ರಜಾಪ್ರಭುತ್ವ ಸರಕಾರಗಳನ್ನು ಪ್ರಭುಗಳಾದ ಪ್ರಜೆಗಳೇ ಆರಿಸಿದಾರೆ. ಆದರೂ ಮತದಾರರಾದ ಪ್ರಜೆಗಳು ಎಲ್ಲರೂ ಚುನಾವಣೆಯಲ್ಲಿ ಪಾಲ್ಗೊಂಡುಮತದಾನ ಮಾಡಬೇಕೆಂಬ ಪ್ರಜ್ಞೆ ಇನ್ನೂ ಬಂದಿಲ್ಲ. ಅದಕ್ಕಾಗಿ ಸರಕಾರವೇ ಈಗ "ಸ್ವೀಪ್" ಕಾರ್ಯಕ್ರಮಗಳ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುತ್ತಿದೆ. ಇದು ನಾಚಿಗೆಗೇಡಿನ ವಿಷಯವಲ್ಲವೇ?

ನಾವು ಮತದಾರರು ಏಕೆ ಮತದಾನ ಮಾಡಬೇಕು? ಎಂಬ ಪರಿಜ್ಞಾನ ನಮ್ಮಲ್ಲಿರಬೇಕು. ಸುಶಿಕ್ಷಿತರಾದ ಎಷ್ಟೋ ಮಂದಿ ತಮ್ಮ ಅಮೂಲ್ಯ ಮತವನ್ನು ಚಲಾಯಿಸುವಲ್ಲಿ ಉದಾಸೀನ ಮಾಡುತ್ತಾರೆ. ಅಷ್ಟೇ ಅಲ್ಲದೆ ಮತಗಟ್ಟೆ ಅಧಿಕಾರಿಗಳಾಗಿ ನೇಮಕವಾಗಿರುವ ಅಧ್ಯಾಪಕರು -ಉಪನ್ಯಾಸಕರು ಕೂಡಾ ತಮ್ಮ ಮತ ಚಲಾಯಿಸಲು ಸೌಲಭ್ಯವಿರುವ ಅಂಚೆ ಮತಪತ್ರ ಅಥವಾ ಚುನಾವಣಾ ಕರ್ತವ್ಯ ಪ್ರಮಾಣ ಪತ್ರ (ಇ.ಡಿ.ಸಿ.)ಪಡೆದುಕೊಳ್ಳಲು ಔದಾಸಿನ್ಯ ತೋರುತ್ತಿರುವ ಬಗ್ಗೆ ಚುನಾವಣಾ ಪ್ರಾಧಿಕಾರವು ತಿಳಿದುಕೊಂಡು ಮತಗಟ್ಟೆ ಅಧಿಕಾರಿಗಳು ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಳ್ಳಬೇಕು ಅದಕ್ಕಾಗಿ ಬೇಕಾದ ಅರ್ಜಿಯನ್ನು ಕೂಡಲೇ ಭರ್ತಿಮಾಡಿ ಸಲ್ಲಿಸಬೇಕು ಎಂದು ಎಚ್ಚರಿಕೆ ನೀಡಿದೆ. ಇದು ನಮ್ಮ ಗುರುವೃಂದದವರ ನಿರ್ಲಕ್ಷ್ಯ ಪ್ರವೃತ್ತಿಯ ಪರಮಾವಧಿಯ ಪ್ರತೀಕವಲ್ಲವೇ?


ನಾನೊಬ್ಬ ಮತ ಹಾಕದಿದ್ದರೂ ಅಭ್ಯರ್ಥಿಗಳು ಆರಿಸಿ ಬರುತ್ತಾರೆ ತಾನೆ? ಅದೂ ಅಲ್ಲದೆ ಯಾರಾದರೊಬ್ಬ ಅಭ್ಯರ್ಥಿ ಗೆದ್ದೇ ಗೆಲ್ಲುತ್ತಾನೆ ತಾನೆ? ಆರಿಸಿ ಬಂದ ಅಭ್ಯರ್ಥಿಯೇ ಉದ್ಧಾರವಾಗುವನಲ್ಲದೆ, ನಮ್ಮನ್ನು ಉದ್ಧಾರ ಮಾಡುತ್ತಾನೆಯೇ? ಮೊದಲಾದ ಉಡಾಫೆಯ ಮಾತನಾಡಿ ಮತಚಲಾವಣೆಗೆ ಹೋಗದಿರುವವರೂ ಇದ್ದಾರೆ. ನಮ್ಮೂರಿಗೆ ಈ ಸವಲತ್ತುಗಳಿಲ್ಲವೆಂದು ಮತದಾನ ಬಹಿಷ್ಕರಿಸುವ ಊರು-ಗ್ರಾಮಗಳೂ ಇವೆ ಎಂಬ ವಿಚಾರ ನಾವು ಮಾಧ್ಯಮಗಳ ಮೂಲಕ ತಿಳಿದುಕೊಂಡಿದ್ದೇವೆ. ತಮ್ಮ ಮತವನ್ನು ಜುಜುಬಿ ಹಣಕ್ಕೆ ಮಾರಾಟ ಮಾಡುವ ಮತದಾರರೂ ಇದ್ದಾರಲ್ಲವೇ?

ನಮ್ಮನ್ನಾಳಲು ಯಾರಾದರೊಬ್ಬರಲ್ಲಿರುವುದು ಖಂಡಿತ. ಅಂತಹ ಆಳುವವರು ಉತ್ತಮ ನಾಗರಿಕನಾಗಿದ್ದು, ದೇಶದ ಅಭಿವೃದ್ಧಿಯ ಚಿಂತಕನಾಗಿರಬೇಕು. ಸದಾ ಜನಸೇವಾಕಾಂಕ್ಷಿಯಾಗಿದ್ದು,ಜನಹಿತ ಕಾರ್ಯಗಳನ್ನು ಮಾಡುವವನಾಗಿರಬೇಕು. ನಮ್ಮೆಲ್ಲಾ ಸರ್ಕಾರಿ ವ್ಯವಸ್ಥೆಗಳನ್ನು ಸರಿಪಡಿಸಿ ಎಲ್ಲರಿಗೂ ಸಮಾನ ಅವಕಾಶ-ಸೌಲಭ್ಯಗಳು ಸಿಗುವಂತಾಗಲು ಪ್ರಾಮಾಣಿಕವಾಗಿ ಪ್ರಯತ್ನಿಸುವವನಾಗಿರಬೇಕು. ಅಂತಹ ಅಭ್ಯರ್ಥಿ ಯಾರು ಎಂದು ಚಿಂತನ ಮಾಡಿ ಅಂತಹವರನ್ನು ನಮ್ಮ ಪ್ರತಿನಿಧಿಯಾಗಿ ಆರಿಸುವುದೇ ಪ್ರಜೆಗಳಾದ ನಮ್ಮ ದೊಡ್ಡ ಜವಾಬ್ದಾರಿ.

ದೇಶದ ಮೇಲೆ ಅಭಿಮಾನವಿರುವ ಪ್ರತಿಯೊಬ್ಬ ನಾಗರಿಕನೂ ಮೇಲಿನ ಎಲ್ಲಾ ವಿಚಾರಗಳನ್ನು ಗಮನಿಸಿ ಎಷ್ಟೇ ಸಮಸ್ಯೆ -ಒತ್ತಡಗಳಿರಲಿ ಅವನ್ನೆಲ್ಲಾ ಬದಿಗಿರಿಸಿ ತಮ್ಮ ಮುಂದಿರುವ ಅಭ್ಯರ್ಥಿಗಳಲ್ಲಿ ಯಾರು ಸಮರ್ಥರು ಎಂದು ಯೋಚಿಸಿ ಅವರಲ್ಲೊಬ್ಬನಿಗೆ ಚುನಾವಣೆಯ ದಿನದಂದು ಮತದಾನ ಮಾಡಬೇಕಾದುದು ಕರ್ತವ್ಯವೆಂದು ತಿಳಿದುಕೊಳ್ಳಬೇಕು.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅದಕ್ಕಾಗಿ ಅವನು ತ್ರಿದಂಡಿ ಸಂನ್ಯಾಸಿಯ ವೇಷಧರಿಸಿ ದ್ವಾರಕೆಗೆ ಬಂದನು. (ತ್ರಿದಂಡವೆಂದರೆ ಕಾಯದಂಡ, ಮನೋದಂಡ ಮತ್ತು ವಾಗ್ದಂಡ ಅಥವಾ ಶಿಖೆ, ಜನಿವಾರ, ದಂಡ) ಅಲ್ಲಿ ಅವನು ಮಳೆಗಾಲದ ನಾಲ್ಕು ತಿಂಗಳುಗಳನ್ನು ಕಳೆದನು. ಆ ತೇಜಸ್ವಿ ಸಂನ್ಯಾಸಿಯನ್ನು ನೋಡಿದ ದ್ವಾರಕೆಯ ಜನರು ಅವನನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಬಲರಾಮನಿಗೂ ಅದು ಅರ್ಜುನನೆಂದು ತಿಳಿಯಲಿಲ್ಲ. ಆದುದರಿಂದ ಅವನೂ ಅರ್ಜುನನಿದ್ದಲ್ಲಿಗೆ ಹೋಗಿ ಅವನನ್ನು ಪೂಜಿಸುತ್ತಿದ್ದನು.

ಒಮ್ಮೆ ಬಲರಾಮನು ಆ ಸಂನ್ಯಾಸಿಯನ್ನು ತನ್ನ ಅರಮನೆಗೆ ಕರೆತಂದನು. ಆತಿಥ್ಯಕ್ಕಾಗಿ ಅವನಿಗೆ ಭಿಕ್ಷೆ ಕೊಟ್ಟನು. ಆ ಸಮಯದಲ್ಲಿ ಅವನು ಸುಭದ್ರೆಯನ್ನು ನೋಡಿದನು. ಅತ್ಯಂತ ಸುಂದರಿಯಾದ ಅವಳಲ್ಲಿ ಅವನಿಗೆ ಅನುರಾಗ ಮೂಡಿತು. ಅವಳೂ ವೀರಕ್ಷತ್ರಿಯನ ವ್ಯಕ್ತಿತ್ವರುವ ಅವನಲ್ಲಿ ಅನುರಕ್ತಳಾದಳು. ನಾಚಿಕೆಯಿಂದ ಮುಗುಳುನಗುತ್ತಾ ಕಡೆಗಣ್ಣಿನಿಂದ ಅವನನ್ನೇ ನೋಡುತ್ತಿದ್ದಳು. ಇಬ್ಬರೂ ಪರಸ್ಪರ ಪ್ರೇಮ ಬಂಧಕ್ಕೊಳಗಾದರು. ಶ್ರೀಕೃಷ್ಣನಿಗೂ, ವಸುದೇವ, ದೇವಕಿಯರಿಗೂ ಸಂನ್ಯಾಸಿಯು ಅರ್ಜುನನೆಂಬುದು ತಿಳಿದಿತ್ತು. ಅರ್ಜುನನು ತನ್ನ ಮನದಿಂಗಿತವನ್ನು ಅವರಿಗೆ ತಿಳಿಸಲು ಅವರು ಮನಃ ಪೂರ್ವಕವಾಗಿ ಅವನ ಸಂಬಂಧವನ್ನು ಅನುಮೋದಿಸಿದರು.

ಒಮ್ಮೆ ಊರ ಜಾತ್ರೆ ಬಂತು. ಸುಭದ್ರೆಯು ರಥದಲ್ಲಿ ಕುಳಿತುಕೊಂಡು ಜಾತ್ರೆಯನ್ನು ನೋಡಲು ಕೋಟೆಯಿಂದ ಹೊರಗೆ ಹೋದಳು. ಅರ್ಜುನ ಸಂನ್ಯಾಸಿಯು ಅಲ್ಲೇ ಅವಳಿಗಾಗಿ ಕಾದಿದ್ದು ಅದೇ ರಥದಲ್ಲಿ ಅವಳನ್ನು ಅಪಹರಿಸಿದನು.

ಆಗ ಬಲರಾಮನ ಸೈನಿಕರು ಅವನನ್ನು ತಡೆದರು. ರಥದಲ್ಲಿ ಕುಳಿತಿದ್ದ ಗಾಂಡೀವಿಯು ಬಾಣಗಳಿಂದ ಹೊಡೆದು ಅವರನ್ನು ಓಡಿಸಿದನು. ಈ ಸಮಾಚಾರವನ್ನು ಕೇಳಿದ ಬಲರಾಮನ ಕೋಪ ಹುಣ್ಣಿಮೆಯ ದಿನದ ಸಮುದ್ರದಂತೆ ಉಕ್ಕೇರಿತು. ಅವನು ಅರ್ಜುನನೊಡನೆ ಯುದ್ಧಕ್ಕೆ ಹೊರಡಬೇಕೆನ್ನುವಷ್ಟರಲ್ಲಿ ಕೃಷ್ಣನೇ ಮೊದಲಾದವರು ಅವನ ಕಾಲು ಹಿಡಿದುಕೊಂಡು ನಿಜ ಸಂಗತಿಯನ್ನು ತಿಳಿಸಿ ಸಮಾಧಾನ ಪಡಿಸಿದರು. ಶಾಂತನೂ, ಸುಪ್ರಸನ್ನನೂ ಆದ ಬಲರಾಮನು



ವಧೂವರರಿಗೆ ಭೂರಿ ಉಪಾಯಗಳನ್ನು ಕಳುಹಿಸಿಕೊಟ್ಟನು.

ಮಿಥಿಲೆಯಲ್ಲಿ ಶ್ರುತದೇವನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ಶ್ರೀಕೃಷ್ಣನ ಪರಮ ಭಕ್ತನಾಗಿದ್ದನು. ಗೃಹಸ್ಥನಾಗಿದ್ದರೂ ವೈರಾಗ್ಯ ಸಂಪನ್ನನಾಗಿದ್ದನು. ಆದುದರಿಂದ ತನಗೆ ದೊರೆತದ್ದಷ್ಟರಿಂದ ಅವನು ಸಂತೋಷ ಪಡುತ್ತಿದ್ದನು.

ಮಿಥಿಲೆಯ ಅರಸು ಬಹುಲಾಶ್ವ. ಜನಕವಂಶಕ್ಕೆ ಸೇರಿದ್ದರಿಂದ ಜನಕನೆಂದೂ ಪ್ರಸಿದ್ಧನಾಗಿದ್ದನು.ಅವನೂ ಶ್ರುತದೇವನಂತೆ ಶ್ರೀಕೃಷ್ಣನಲ್ಲಿ ಅನನ್ಯ ಭಕ್ತಿಯಿಟ್ಟಿದ್ದನು. ಅವನು ನಿರಹಂಕಾರನು, ಪ್ರಜಾವತ್ಸಲನು.

ಭಕ್ತವತ್ಸಲನಾದ ಶ್ರೀಕೃಷ್ಣನಿಗೆ ಇವರಿಬ್ಬರಿಗೆ ದರ್ಶನ ಕೊಡುವ ಮನಸ್ಸಾಯಿತು. ದಾರುಕನಿಂದ ರಥವನ್ನು ತರಿಸಿ ಮಿಥಿಲೆಯ ಕಡೆಗೆ ಹೊರಟನು. ಜೊತೆಯಲ್ಲಿ ನಾರದ, ವಾಮದೇವ, ಅತ್ರಿ, ಕೃಷ್ಣದ್ವೈಪಾಯನ, ಪರಶುರಾಮ, ಅಸಿತ, ಅರುಣಿ, ಜಕ, ಬೃಹಸ್ಪತಿ, ಕಣ್ವ, ಮೈತ್ರೇಯ, ಚ್ಯವನ ಮೊದಲಾದ ಮುನಿಗಳನ್ನೂ ಕೂಡಿಸಿಕೊಂಡನು. ದಾರಿಯುದ್ದಕ್ಕೂ ಸಿಕ್ಕಿದ ದೇಶಗಳ ಪೌರರು, ಗ್ರಾಮೀಣ ಜನರು ಇವರನ್ನು ಭಕ್ತಿಯಿಂದ ಸಂಮಾನಿಸುತ್ತಿದ್ದರು. ಆನರ್ತಾದಿ ದೇಶಗಳನ್ನು ದಾಟಿ ಅವರು ಮಿಥಿಲೆಯನ್ನು ತಲುಪಿದರು. ಶ್ರೀಕೃಷ್ಣನು ತಮ್ಮ ಪಟ್ಟಣಕ್ಕೆ ಬಂದ ಸುದ್ದಿಯನ್ನು ಕೇಳಿ ಪ್ರಜೆಗಳು- ಪೌರರು ಮತ್ತು ಜನಪದರು ಅತೀವ ಆನಂದದಿಂದ. ಪೂಜಾ ಸಾಮಾಗ್ರಿಗಳೊಂದಿಗೆ ಅವನನ್ನೂ ಮುನಿಗಳನ್ನೂ ಕಾಣಲು ಧಾವಿಸಿ ಬಂದರು. ಶ್ರುತದೇವ, ಬಹುಲಾಶ್ವರೂ ಮಿತಿಮೀರಿದ ಹರ್ಷದಿಂದ ಅವರನ್ನು ಸ್ವಾಗತಿಸಿದರು. ಇಬ್ಬರೂ ಶ್ರೀಕೃಷ್ಣನನ್ನೂ, ಮುನಿಗಳನ್ನೂ ಆತಿಥ್ಯಕ್ಕಾಗಿ ಆಮಂತ್ರಿಸಿದರು. ಅವರ ಸಂತೋಷಕ್ಕಾಗಿ ಶ್ರೀಕೃಷ್ಣನು ತನ್ನ ಮಾಯಾ ಬಲದಿಂದ ಇಬ್ಬರಲ್ಲಿಗೂ ಏಕಕಾಲದಲ್ಲಿ ಹೋದನು. ಶ್ರೀಕೃಷ್ಣನು ತಮ್ಮ ಮನೆಗೆ ಮಾತ್ರ ಬಂದಿದ್ದಾನೆಂದು ಇಬ್ಬರೂ ಅಂದುಕೊಂಡರು. ಬಹುಲಾಶ್ವನು ಕೃಷ್ಣನನ್ನು ಯಥಾವಿಧಿ ಪೂಜಿಸಿ ಭಕ್ತ ಸಹಜವಾದ ಕ್ರಮದಿಂದ ಸುತ್ತಿಸಿದನು. ಮುನಿಗಳನ್ನೂ ಯಥಾಯೋಗ್ಯ ಅರ್ಚಿಸಿ ಅವರಿಂದ ಆಶೀರ್ವಾದ ಪಡೆದನು. ಇತ್ತ ಶ್ರುತದೇವನೂ ಭಗವಂತನನ್ನು ಭಕ್ತ್ಯುತ್ಕರ್ಷದಿಂದ ಆರಂಭಿಸಿದನು. ತನ್ನ ವಾಗ್ಬಲಕ್ಕನುಗುಣವಾಗಿ ಸ್ತೋತ್ರಗೈದನು. ಅವನ ಅಹ್ವಾನದಂತೆ ಅಲ್ಲಿಗೆ ಬಂದ ಋಷಿ ಮುನಿಗಳನ್ನು ಭಕ್ತಿಯಿಂದ ಸತ್ಕರಿಸಿದನು. ತನಗೆ ಭಗವಂತನ ಮತ್ತು ಬ್ರಹ್ಮರ್ಷಿಗಳ ದರ್ಶನ ಹೇಗಾಯಿತೆಂದು ವಿಸ್ಮಯ ಪಟ್ಟನು. ಆಗ ಜಗದ್ಗುರು ಶ್ರೀಕೃಷ್ಣನು ಅವನ ಕೈಯನ್ನು ಹಿಡಿದು ಕೊಂಡು ಹೇಳಿದನು. "ವಿಪ್ರವರ್ಯನೇ, ಈ ಮಹಾನುಭಾವರಾದ ಮುನಿಗಳು ಲೋಕಕಲ್ಯಾಣಕ್ಕಾಗಿ ಭೂಮಿಯ ಮೇಲೆ ಸಂಚರಿಸುತ್ತಾರೆ

(ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಕಟಪಾಡಿ ವೆಂಕಟರಮಣ ರಾವ್, ಕುಡಾಲ್

ಮಹಾರಾಷ್ಟ್ರದ ಕುಡಾಲ್‌ನಲ್ಲಿ ವಾಸ್ತವ್ಯದಲ್ಲಿರುವ ಕಟಪಾಡಿ ಮೂಡಬೆಟ್ಟು ವೆಂಕಟರಮಣರಾಯರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪತ್ರಿಕೆಗೆ ಪ್ರೋತ್ಸಾಹ ನೀಡಿದ್ದಾರೆ. ಉಡುಪಿ ತಾಲೂಕು ಕಟಪಾಡಿಯ ಮೂಡಬೆಟ್ಟು ಗ್ರಾಮದ ದಿ/ಕೆ.ಆನಂದರಾವ್ ಮತ್ತು ದಿ/ಲಕ್ಷ್ಮಿಆನಂದರಾವ್ ದಂಪತಿಗಳ ನಾಲ್ವರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳಲ್ಲಿ ಪ್ರಥಮ ಪುತ್ರರಾದ ಶ್ರೀ ವೆಂಕಟರಮಣರಾಯರು ಕಟಪಾಡಿಯ ಎಸ್. ವಿ.ಎಸ್. ಪ.ಪೂ. ಕಾಲೇಜಿನಲ್ಲಿ 8ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮುಗಿಸಿ 1954ರಲ್ಲಿ ವ್ಯಾಪಾರದ ಕಡೆ ಗಮನ ಹರಿಸಿ ಅವರ ದೊಡ್ಡಪ್ಪನವರಾದ ದಿ.ಎಲ್ಲೂರು ದೇವರಾವ್ ಜೊತೆ ಮಹಾರಾಷ್ಟ್ರದ ಲೋಣಂದಾದಲ್ಲಿ ಹೊಟೇಲು ಉದ್ಯಮದಲ್ಲಿ ತರಬೇತಿ ಪಡೆದುಕೊಂಡರು.

ಬಳಿಕ ಉಡುಪಿಯಲ್ಲಿ ಕೆಲವು ವರ್ಷ ಸ್ವಂತ ಹೊಟೇಲು ನಡೆಸಿ, ಮುಂದೆ 1970ರಲ್ಲಿ ಮಹಾರಾಷ್ಟ್ರದ ಸಿಂದುದುರ್ಗ ಜಿಲ್ಲೆಯ ಕುಡಾಲ್‌ನಲ್ಲಿ "ಹೊಟೇಲ್ ತ್ರಿವೇಣಿ ಕುಡಾಲ್" ಸ್ಥಾಪಿಸಿ ಸುಮಾರು 40 ವರ್ಷ ಕಾಲ ಹೊಟೇಲ್ ಉದ್ಯಮ ನಡೆಸಿ ಯಶಸ್ವಿಯಾದರು. ಅಲ್ಲದೆ ಮಹಾರಾಷ್ಟ್ರದ ಬೇರೆ ಬೇರೆ ಊರುಗಳಿಗೆ



ಹೋಗಿ-ಬರುವ ನಮ್ಮ ಸಮಾಜದ ಬಂಧುಗಳು ಹಾಗೂ ಊರ ಪರಿಚಯಸ್ಥರು ತಮ್ಮ ಹೊಟೇಲಿಗೆ ಬೇಟಿ ನೀಡಿದಾಗ ಅವರಿಗೆ ಬೇಕಾದ ಸೌಲಭ್ಯ ಹಾಗೂ ಸಹಾಯ ನೀಡುವಲ್ಲಿ ಶ್ರೀಯುತರಿಗೆ ಎಲ್ಲಿಲ್ಲದ ಉತ್ಸಾಹ. ಕೊಡುಗೈ ದಾನಿಗಳೂ ಆಗಿರುವ ವೆಂಕಟಮಣರಾಯರು ನಮ್ಮ ಉಡುಪಿಯ ಶಾರದಾ ಮಂಟಪ ಮಾತ್ರವಲ್ಲದೆ ಸಮಾಜದ ಇತರ ಸಂಘಟನೆಗಳಿಗೂ ತಮ್ಮ ಉದಾರ ನೆರವನ್ನು ನೀಡಿರುತ್ತಾರೆ.

ಸದ್ಯ ಉದ್ಯಮದಿಂದ ನಿವೃತ್ತಿಪಡೆದು ಕೊಂಡಿರುವ ರಾಯರು ಹರಿದ್ವಾರದ ಪತಂಜಲಿ ಯೋಗ ಪೀಠದ ಆಶ್ರಯದಲ್ಲಿ ಯೋಗ ಶಿಕ್ಷಣ ಪಡೆದು, ಶ್ರೀ ರಾಮ್‌ದೇವ್ ಸ್ವಾಮೀಜಿಯವರಿಂದ ದೀಕ್ಷೆ ಪಡೆದು ಯೋಗ ಶಿಕ್ಷಕರಾಗಿ (ಸಾಧಕರಾಗಿ) ಬೇರೆ ಬೇರೆ ಕಡೆ ಯೋಗ ತರಬೇತಿ ನೀಡುತ್ತಿದ್ದಾರೆ. ಉಡುಪಿಯ ಶಾರದಾ ಮಂಟಪದಲ್ಲಿಯೂ ಇವರ ನೇತೃತ್ವದಲ್ಲಿ ಯೋಗ ಶಿಬಿರಗಳು ನಡೆದಿರುವುದನ್ನು ನಾವು ನೆನಪಿಸಿಕೊಳ್ಳಬಹುದು.

ಶ್ರೀಮತಿ ಶಾಂತಾರನ್ನು (ದಿ. ಪರೀಕ ವಿಷ್ಣುಮೂರ್ತಿರಾಯರ ಪುತ್ರಿ) ವಿವಾಹವಾಗಿರುವ ಶ್ರೀಯುತ ವೆಂಕಟರಮಣರಾವ್ ದಂಪತಿಗಳಿಗೆ ನಾಲ್ವರು ಪುತ್ರಿಯರಿದ್ದು (ಆಶಾ, ಅನಿತಾ, ಸಂಪದಾ, ಅಂಜನಾ) ವಿವಾಹಿತರಾಗಿದ್ದು ಮಹಾರಾಷ್ಟ್ರದಲ್ಲಿಯೇ ವಾಸ್ತವ್ಯದಲ್ಲಿದ್ದಾರೆ. ಕಳೆದ ತಿಂಗಳ ಸಂಚಿಕೆಯಲ್ಲಿ ಮಹಾಪೋಷಕರಾಗಿ ಪರಿಚಯಿಸಿರುವ ಶ್ರೀ ಕೆ. ಉಮೇಶ್‌ರಾವ್, ಶ್ರೀ ವೆಂಕಟರಮಣರಾಯರ ಕಿರಿಯ ಸಹೋದರರಾಗಿದ್ದಾರೆ.

ಶ್ರೀ ವೆಂಕಟರಮಣರಾವ್ ಅವರ ಕೊಡುಗೆಗಾಗಿ ಶ್ರೀ ಶಾರದಾ ಬಳಗವು ಅನಂತ ಕೃತಜ್ಞತೆ ಸಲ್ಲಿಸುತ್ತಾ ಅವರಿಗೆ ಹಾಗೂ ಅವರ ಕುಟುಂಬಕ್ಕೆ ಇನ್ನೂ ಹೆಚ್ಚಿನ ಶ್ರೇಯಸ್ಸನ್ನುಂಟು ಮಾಡಲಿ ಎಂದು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್, ಕುಡಾಲ್.

## ಉದಯಾದ್ರಿಯಲ್ಲಿ ಬ್ರಹ್ಮ ಕುಂಭಾಭಿಷೇಕ ಸಂಪನ್ನ

(....1ನೇ ಪುಟದಿಂದ)




ಯಶಸ್ವಿಯಾಯಿತು.

**ಕೇವಲ 48 ದಿನಗಳ ಸಾಧನೆ**

ಈ ಎಲ್ಲಾ ಕೆಲಸಗಳು ಬೊಕ್ಕಸ ಚಂದ್ರಶೇಖರರಾಯರ ನೇತೃತ್ವದಲ್ಲಿ ನಡೆದಿದ್ದರೂ, ಶ್ರೀಯುತರಾದ ದಿವಾಕರ ರಾವ್, ಕರುಣ್‌ರಾವ್ ಬೆಳ್ಳೆ, ಸುಧಾಕರ್‌ಬೆಳ್ಳೆ, ಇನ್ನಾ ಸುದರ್ಶನರಾವ್, ರಾಜಶೇಖರರಾವ್, ನಯನಾಭಿರಾಮರಾವ್,ಪಿ.ಡಿ. ಶೇಖರ್ ರಾವ್, ನಂದಿಕೂರು ಜನಾರ್ದನರಾವ್, ಉಡುಪಿ ಪ್ರಫುಲ್ಲಚಂದ್ರರಾವ್ ಪ್ರತಿದಿನ ಜೊತೆಗಿದ್ದು, ಕೆಲಸದ ಉಸ್ತುವಾರಿಯನ್ನು ನೋಡಿಕೊಂಡು ಕಾಮಗಾರಿಗಳು ಕ್ಷಿಪ್ರಗತಿಯಲ್ಲಿ ನಿರ್ಮಾಣಗೊಳ್ಳಲು ಕಾರಣವಾಯಿತು. ಕೆಲಸ ಪ್ರಾರಂಭಿಸಿ ಕೇವಲ 48 ದಿನಗಳಲ್ಲಿ ಈ ಎಲ್ಲಾ ನಿರ್ಮಾಣಗಳು ಮುಕ್ತಾಯಗೊಂಡಿದ್ದು ಸಮಿತಿಯ ಬಹುದೊಡ್ಡ ಸಾಧನೆ.

**ಮುಂದಿನ ಕನಸು**

ಪಡುಬಿದ್ರೆಯ ಪುಣ್ಯಪುರುಷ ಅವಧೂತ ಯೋಗಿ, ಬ್ರಹ್ಮಚಾರಿ ಮಂತ್ರಶಾಸ್ತ್ರಕುಶಲ ಉದಯಾದ್ರಿ ಶ್ರೀ ನಾರಾಯಣರಾಯರು ಗೋಕರ್ಣ ತೀರ್ಥಕ್ಷೇತ್ರ ದರ್ಶನಕ್ಕೆ ಹೋದಾಗ ಸ್ವಪ್ನದಲ್ಲಿ ಪ್ರೇರಣೆಯಾದಂತೆ ಸ್ನಾನ ಮಾಡುವಾಗ ಗಣಪತಿಯ ವಿಗ್ರಹವೊಂದು ಕಾಣಿಸಿಕೊಂಡು ಆ ವಿಗ್ರಹವನ್ನು ಉದಯಾದ್ರಿಯಲ್ಲಿ ಪ್ರತಿಷ್ಠಾಪಿಸಿದ್ದು ಈ ಹಿಂದೆಯೇ ತಿಳಿದಿರುವ ವಿಚಾರ. ಅದರಂತೆ ಹಿಂದಿನಿಂದಲೂ ಎಳ್ಳಮವಾಸ್ಯೆ ಗಣಪತಿ ಎಂದೇ ಪ್ರಖ್ಯಾತಿ ಇರುವ ಶ್ರೀ ಗಣಪತಿ ದೇವರಿಗೆ ಪ್ರತಿವರ್ಷ ಎಳ್ಳಮವಾಸ್ಯೆಯಿಂದ ಮೂರು ದಿನಗಳ ಕಾಲ ವರ್ಧಂತಿ ಉತ್ಸವಾದಿಗಳನ್ನು ನಡೆಸಬೇಕೆಂದು ಸಮಿತಿ ನಿಶ್ಚಯಿಸಿದೆ, ಅದಕ್ಕಾಗಿ ಬಲಿದೇವರ ಅಟ್ಟೆ ಪ್ರಭಾವಳಿಯನ್ನು ದಾನಿಗಳ ಮೂಲಕ ಈಗಾಗಲೇ ಸಂಗ್ರಹಿಸಲಾಗಿದೆ. ಅಲ್ಲದೆ ದೇವಸ್ಥಾನದ ಮುಂದಿನ ಖಾಲಿ ಸ್ಥಳದಲ್ಲಿ ಸಭಾಭವನ ನಿರ್ಮಾಣ ಮಾಡುವ ಯೋಜನೆಯನ್ನೂ ಹಾಕಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಈ ಎಲ್ಲಾ ಯೋಜನೆಗಳನ್ನು ದಾನಿಗಳ ನೆರವಿನೊಂದಿಗೆ ಸಾಕಾರಗೊಳಿಸಬೇಕೆಂಬುದು ಸಮಿತಿಯ ಇಚ್ಛೆಯಾಗಿದೆ,

### 18-05-2013 ರಂದು ಸಭಾಭವನದ ಶಿಲಾನ್ಯಾಸ

ನೂತನ ಸಭಾಭವನ ನಿರ್ಮಾಣ ಮಾಡುವ ಉದ್ದೇಶದಿಂದ ಉದಯಾದ್ರಿ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಳದ ನೂತನ ಜೀರ್ಣೋದ್ಧಾರ ಸಮಿತಿಯು ದಿನಾಂಕ 18-05-2013 ರಂದು ಮಧ್ಯಾಹ್ನ 12.30ಕ್ಕೆ ಸಭಾಭವನದ ಶಿಲಾನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಉಡುಪಿಯ ಅಷ್ಟ ಮಠಾಧೀಶರಲ್ಲಿ ಹಿರಿಯ ಯತಿಗಳಾದ ಪೇಜಾವರ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ಈ ಶಿಲಾನ್ಯಾಸ ಕಾರ್ಯವನ್ನು ನಡೆಸಲಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಪಡುಬಿದ್ರೆ ಪೇಟೆಯಲ್ಲಿ ಶ್ರೀ ಸ್ವಾಮೀಜಿಯವರನ್ನು ಸ್ವಾಗತಿಸಿ, ಮೆರವಣಿಗೆ ಮೂಲಕಉದಯಾದ್ರಿಗೆ ಕರೆದೊಯ್ಯಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿಯು ಕರೆನೀಡಿದೆ.

## ಪಾದೆಬೆಟ್ಟಿನಲ್ಲಿ ಶಂಕರ ಜಯಂತಿ, ನರಸಿಂಹ ಜಯಂತಿ

ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ದಿನಾಂಕ 15-05-2013ರಂದು ವರ್ಧಂತ್ಯುತ್ಸವ ಹಾಗೂ ಶ್ರೀ ಶಂಕರ ಜಯಂತಿ ಪ್ರಯುಕ್ತ ಧಾರ್ಮಿಕ ಕಾರ್ಯಕ್ರಮಗಳು ಅನ್ನಸಂತರ್ಪಣೆಯೊಂದಿಗೆ ನಡೆಯಲಿರುವುದು. ಅಲ್ಲದೆ ತಾ.23-05-2013ರಂದು ಶ್ರೀ ನರಸಿಂಹ ಜಯಂತಿಯಂದು ಮಧ್ಯಾಹ್ನ ಅನ್ನಸಂತರ್ಪಣೆ ಹಾಗೂ ರಾತ್ರಿ ವಿಶೇಷ ರಂಗಪೂಜಾ ಕಾರ್ಯಕ್ರಮವು ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿಯು ವಿನಂತಿಸಿದೆ.



ಕರ್ಣಾಟಕ ಬ್ಯಾಂಕ್‌ನಲ್ಲಿ ಖಜಾನೆ ಮತ್ತು ಲೆಕ್ಕಪತ್ರ ವಿಭಾಗದ ಅಧಿಕಾರಿಯಾಗಿದ್ದ ನಂದಳಿಕೆ ಬಾಲಚಂದ್ರ ರಾವ್ ಅವರು ಶನಿವಾರ ಸೇವೆಯಿಂದ ನಿವೃತ್ತರಾಗಿದ್ದು, ಈ ಸಂದರ್ಭದಲ್ಲಿ ಬ್ಯಾಂಕಿನ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಬ್ಯಾಂಕಿನ ಚೀಫ್ ಮ್ಯಾನೇಜರ್ ಕೆ. ಮುರಳೀಧರ್, ಕರ್ಣಾಟಕ ಬ್ಯಾಂಕ್ ಎಂಪ್ಲಾಯೀಸ್ ಎಸೋಸಿಯೇಶನಿನ ಪ್ರಧಾನ ಕಾರ್ಯದರ್ಶಿ ಪಿ. ಆರ್. ಕಾರಂತ್ ಮುಖ್ಯ ಅತಿಥಿಗಳಾಗಿದ್ದರು. ನಂದಳಿಕೆ ಬಾಲಚಂದ್ರ ರಾವ್ ಅವರ ಪತ್ನಿ ಎನ್, ವಿಜಯಲಕ್ಷ್ಮಿ ಬಿ. ರಾವ್, ಪುತ್ರಿ ಎನ್. ಸೌಜನ್ಯ ರಾವ್ , ಬ್ಯಾಂಕಿನ ಅಧಿಕಾರಿ ಎಸ್. ಶ್ರೀಧರ್ ಉಪಸ್ಥಿತರಿದ್ದರು.

### ವಿದೇಶ ಪ್ರಯಾಣ

ಪಡುಬಿದ್ರೆ ಪಾದೆಬೆಟ್ಟುವಿನಲ್ಲಿ ವಾಸ್ತವ್ಯ ದಲ್ಲಿರುವ ಶ್ರೀ ಉಚ್ಚಿಲ ಸುಬ್ರಾಯ ಶ್ಯಾನುಭಾಗ್ ಹಾಗೂ ಶ್ರೀಮತಿ ಸುಮಿತ್ರಾ ಶ್ಯಾನುಭಾಗ್ ದಂಪತಿಗಳು ಕಳೆದ ಫೆಬ್ರವರಿ ತಿಂಗಳಿನಿಂದ ಅಬುದಾಬಿಯಲ್ಲಿರುವ ತಮ್ಮ ಪುತ್ರಿ ಶ್ರೀಮತಿ ಜಯಶ್ರೀ ಹಾಗೂ ಅಳಿಯ ಶ್ರೀ ಕೃಷ್ಣ ಪ್ರಸಾದ್‌ರ ಜೊತೆ ಇದ್ದು ಇದೀಗ ಸ್ವದೇಶಕ್ಕೆ ಹಿಂತಿರುಗಿದ್ದಾರೆ.

## ಬ್ರಾಹ್ಮಣ ಜಾಗೃತಿ ಸಮ್ಮೇಳನದಲ್ಲಿ ಶ್ರೀ ಸಭಾದ ಮಳಿಗೆ




ಇತ್ತೀಚೆಗೆ ನಡೆದ ಬ್ರಾಹ್ಮಣ ಜಾಗೃತಿ ಸಮ್ಮೇಳನದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಮಳಿಗೆಯು ಸರ್ವರ ಮೆಚ್ಚುಗೆಗೆ ಪಾತ್ರವಾಯಿತು. ಮಳಿಗೆಯಲ್ಲಿ ವಿವಾಹ ವೇದಿಕೆ, ಜ್ಞಾನಶಕ್ತಿ ಮಾಸ ಪತ್ರಿಕೆ, ಸಮಾಜಕ್ಕೆ ಸಂಬಂದಿಸಿದ ಪುಸ್ತಕಗಳು, ಶೃಂಗೇರಿ ಶ್ರೀಗಳ ಕಿರು ಪರಿಚಯ, ಸುಬ್ರಹ್ಮಣ್ಯ ಸಹಕಾರಿ ಬ್ಯಾಂಕಿನ ಮಾಹಿತಿಕಛೇರಿಗಳಿದ್ದು ಪೇಜಾವರ ಶ್ರೀಗಳು, ಪುತ್ತಿಗೆ ಶ್ರೀಗಳು ಬೇಟಿ ನೀಡಿ ಶುಭಾಶೀರ್ವಾದ ನೀಡಿದರು. ಸಮ್ಮೇಳನಾಧ್ಯಕ್ಷ ಶ್ರೀ ಸಿ ಸದಾನಂದ ಮಯ್ಯ, ಶ್ರೀ ಪ್ರದೀಪ ಕುಮಾರ್ ಕಲ್ಕೂರ, ಶರವು ಶ್ರೀ ರಾಘವೇಂದ್ರ ಶಾಸ್ತ್ರಿಗಳು ಬೇಟಿ ನೀಡಿ ಉತ್ಸಾಹದ ಮಾತುಗಳನ್ನಾಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತ ರಾವ್ ವ್ಯವಸ್ಥೆ ನಿರ್ವಹಿಸಿದರೆ ಅಧ್ಯಕ್ಷ ಶ್ರೀ ಸಿ. ಎಸ್. ರಾವ್, ಉಪಾಧ್ಯಕ್ಷ ಡಾ. ಎ. ಪಿ ಕೃಷ್ಣ ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ, ಶ್ರೀ ಶಶಿಕಾಂತ ರಾವ್, ಶ್ರೀ ಬುಜಂಗ ರಾವ್ ಮಳಿಗೆಯನ್ನು ನಿರ್ವಹಿಸಿ ಸೂಕ್ತ ಮಾಹಿತಿ ನೀಡಿದರು.

**ಚಿತ್ರ ñ ರಘುವೀರ ಪೆರ್ಡೂರ್, ವರದಿ : ಪಿ. ಶ್ರೀಕಾಂತ ರಾವ್**

## ಜೀರ್ಣೋದ್ಧಾರದಲ್ಲಿ ತೊಡಗಿದ ಚೆಂಡುಕಳ ಶ್ರೀ ಸೋಮನಾಥ ದೇವಸ್ಥಾನ



ಕೇರಳ ರಾಜ್ಯದ ಗಡಿನಾಡು ಕಾಸರ ಗೋಡು ತಾಲೂಕಿನ ಚೆಂಡುಕಳ ಶ್ರೀ ಸೋಮ ನಾಥ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಸಂಕಲ್ಪ ಮಾಡಿದ್ದು ಅದಕ್ಕಾಗಿ ಜೀರ್ಣೋದ್ಧಾರ ಸಮಿತಿಯೊಂದನ್ನು ರಚಿಸಿದ್ದು ಸಮಿತಿಯು ಇತ್ತೀಚೆಗೆ ಶ್ರೀ ಕ್ಷೇತ್ರ ಶೃಂಗೇರಿಗೆ ಭೇಟಿಕೊಟ್ಟು ಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರಿಂದ ಅನುಜ್ಞೆಯನ್ನು ಪಡೆಯಿತು. ಅಲ್ಲದೆ ಶ್ರೀ ಶ್ರೀಗಳು ಜೀರ್ಣೋದ್ಧಾರ ನೆರವೇರುವಂತೆ ಹರಸಿ ಮಂತ್ರಾಕ್ಷತೆಯನ್ನು ನೀಡಿ ಶ್ರೀ ದೇವಸ್ಥಾನದ ತಂತ್ರಿಗಳನ್ನಾಗಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರನ್ನು ನೇಮಿಸಿರುತ್ತಾರೆ. ಶ್ರೀಗಳ ಭೇಟಿಯ ಸಮಯದಲ್ಲಿ ನಮ್ಮ ಸಮಾಜದ ಧುರೀಣರಾದ ಶ್ರೀ ಕರುಣ್‌ರಾವ್ ಬೆಳ್ಳೆಯವರು ಸಮಿತಿಯ ಜೊತೆ ಇದ್ದು ಸಹಕರಿಸಿದರು.

**ವರದಿ : ಡಾ| ಚೆಂಡುಕಳ ರಮೇಶ್ ರಾವ್, ಕಲ್ಯಾಣಪುರ**

# ಶಾಂತಿ ಕರ್ಮ ಪರಿಚಯ

–ಪಾವಂಜೆ ವಾಗೀಶ ಎಸ್. ಶಾಸ್ತ್ರಿ, ಉಡುಪಿ

ಪ್ರತಿಯೊಬ್ಬ ಬ್ರಾಹ್ಮಣ ಉಪನಯನ ಕಾಲದಲ್ಲಿ ಯಜ್ಞೋಪವೀತವನ್ನು ಧರಿಸುವಾಗ ಮತ್ತು ಮುಂದೆ ನೂತನ ಯಜ್ಞೋಪವೀತ ಧಾರಣೆ ಮಾಡುವಾಗ ಶ್ರೌತ–ಸ್ಮಾರ್ತ ನಿತ್ಯ ಕರ್ಮ ಅನುಷ್ಠಾನ ಯೋಗ್ಯತಾ ಸಿದ್ಧಿಗಾಗಿ ಎಂಬ ಸಂಕಲ್ಪವನ್ನು ಮಾಡುತ್ತಾನೆ. ಶ್ರೌತ ಎಂದರೆ ವೇದೋಕ್ತವಾದ ಯಜ್ಞಯಾಗಗಳು ಮತ್ತು ಗ್ರಹ್ಯ ಸೂತ್ರದಲ್ಲಿ ಹೇಳಿದ ಸಂಸ್ಕಾರ ಕರ್ಮಗಳು ಹಾಗೂ ಆಚರಣೆಗಳು. ಸ್ಮಾರ್ತ ಎಂದರೆ ಸ್ಮೃತಿ ಅಥವಾ ಧರ್ಮಶಾಸ್ತ್ರಗಳಲ್ಲಿ ಹೇಳಿದ ಕರ್ಮಗಳು. ಕರ್ಮ ಎಂದರೆ ಕರ್ತವ್ಯ ಎಂಬ ಅರ್ಥವೂ ಇದೆ. ಇನ್ನು ನಿತ್ಯ ಮಾಡುವ ಸಂಧ್ಯಾ ವಂದನೆ ದೇವ ಪೂಜೆಗಳು ನಿತ್ಯ ಕರ್ಮಗಳು. ವಿಶೇಷ ಸಂದರ್ಭಗಳಲ್ಲಿ ಆಚರಿಸುವಂಥದ್ದು **ನೈಮಿತ್ತಿಕ ಕರ್ಮ**. ಫಲಾಪೇಕ್ಷೆಯಿಂದ ಮಾಡುವುದು **ಕಾಮ್ಯ ಕರ್ಮ**. ಅರಿಷ್ಠ ನಿವಾರಣೆಗಾಗಿ ಮಾಡುವುದು **ಶಾಂತಿ ಕರ್ಮ**.

ಶಾಂತಿ ಎಂದರೆ ಅನೇಕ ಅರ್ಥಗಳಿವೆ ಕಾಮ, ಕ್ರೋಧ ಮುಂತಾದ ಮನೋವಿಕಾರಗಳು ಇಲ್ಲದಿರುವುದು ಹೊರಗಿನ ಉಪದ್ರವ ತೊಂದರೆಗಳನ್ನು ತಡೆಯುವುದು ನೆಮ್ಮದಿ, ಸಮಾಧಾನ, ವಿಶ್ರಾಂತಿ, ಮಂಗಲ, ತೃಪ್ತಿ, ಸಂತೋಷ ಹೀಗೆ ಅನೇಕ ಅರ್ಥಗಳಿವೆ. ಗ್ರಹಗಳಿಂದ ಸೂಚಿತವಾಗುವ ಅರಿಷ್ಟಗಳು ಅಥವಾ ಪ್ರತಿಕೂಲತೆಗಳನ್ನು ನಿವಾರಿಸುವ ಮತ್ತು ಅಶುಭ ಫಲಗಳನ್ನು ನಾಶ ಮಾಡುವ ಜಪ – ಪೂಜೆ ಹೋಮ ಇವುಗಳು ಕೂಡಾ ಶಾಂತಿ ಕರ್ಮಗಳಾಗಿವೆ.

ಹೇಗೆ ಧರಿಸಿದ ಕಬ್ಬಿಣದ ಕವಚವು ಆಯುಧದ ಹೊಡೆತದಿಂದ ಶರೀರವನ್ನು ರಕ್ಷಿಸುತ್ತದೆಯೋ ಹಾಗೆ ಜ್ಞಾತ– ಅಜ್ಞಾತ ದೋಷಗಳ ರಾಶಿಯ ಫಲವನ್ನು ಶಾಂತಿಕರ್ಮವು ಶಮನಗೊಳಿಸುತ್ತದೆ. ಜೀವಮಾನದಲ್ಲಿ ಅವಿವೇಕ ಕಾಮ, ಕ್ರೋಧ, ಲೋಭ ಮತ್ತು ಭಯ ಇವುಗಳಿಂದ ದುಷ್ಟ ವರ್ತನೆಗಳು ಮನುಷ್ಯನಿಂದ ನಡೆದು ಹೋಗುತ್ತವೆ. ಆಗ ಪಾಪದ ಫಲವನ್ನು ಅನುಭವಿಸಲೇ ಬೇಕಾಗುತ್ತದೆ. ಅಗ ಪಾಪದ ಪ್ರಾಯಶ್ಚಿತ್ತವಾಗಿ ದೋಷದ ಶಾಂತಿಗಾಗಿ, ದೇವತಾನುಗ್ರಹದ ಪ್ರಾಪ್ತಿಗಾಗಿ ಶಾಂತಿ ಕರ್ಮವನ್ನು ಆಚರಿಸಬೇಕೆಂದು ಶಾಸ್ತ್ರಗಳು ಸೂಚಿಸಿವೆ.

ಜ್ಯೋತಿಷ ಶಾಸ್ತ್ರದಲ್ಲಿ ಗ್ರಹಗಳ ದಶಾಕಾಲದ ಒಟ್ಟು ವರ್ಷಗಳು 120.ವೇದಗಳಲ್ಲಿ ಹೇಳರುವಂತೆ [ಶತಮಾನಂ ಭವತಿ] 100 ವರ್ಷಗಳ ಮನಷ್ಯನ ಪೂರ್ಣಾಯುಷ್ಯ. ಜೀವನದ ಪ್ರಮುಖವಾದ ಹಾಗೂ ಕಾರ್ಯಶೀಲವಾದ ಘಟ್ಟ ಅರ್ಧಾಯುಷ್ಯಕ್ಕೆ ಮುಗಿದಂತೆ. ಆದುದರಿಂದ 50ನೇ ವರ್ಷದಿಂದ ಆರಂಭಿಸಿ 100 ವರ್ಷದ ವರೆಗೆ ಪ್ರತಿ 5 ವರ್ಷಕ್ಕೆ ಶಾಂತಿಗಳನ್ನು ಶಾಸ್ತ್ರಕಾರರು ನಿರ್ಣಯಿಸಿದ್ದಾರೆ. ಅವುಗಳ ವಿವರ ಈ ರೀತಿ ಇವೆ.


ವೈಷ್ಣವೀ [50 ವರ್ಷ], ವಾರುಣೀ [55 ವರ್ಷ], ಉಗ್ರರಥ [60 ವರ್ಷ], ಮಹಾರಥಿ [65], ಭೃಮರಥೀ [70], ಐಂದ್ರೀ [75], ಸಹಸ್ರ ಚಂದ್ರ ದರ್ಶನ [80], ರೌದ್ರೀ [85], ಸೌರೀ [90], ತ್ಯಂಬಕ [95] ಮತ್ತು ಮಹಾಮೃತ್ಯುಂಜಯ [100] ಈ ರೀತಿ ಪ್ರತೀ 5 ವರ್ಷಗಳಿಗೊಮ್ಮೆ ಶಾಂತಿ ಹೋಮ ಮಾಡಿಸುವ ಪದ್ಧತಿಯೂ ಇದೆ.

ಶಾಂತಿ ಕಮಲಾಕರ ಗ್ರಂಥದಲ್ಲಿ ಶೌನಕ ಮಹರ್ಷಿಗಳ ಅಭಿಪ್ರಾಯವನ್ನು ಹೀಗೆ ಸೂಚಿಸಿದ್ದಾರೆ. 60ನೇ ವರ್ಷಕ್ಕೆ ಮೃತ್ಯು ಭಯ, ಕೆಟ್ಟ ಕನಸುಗಳು, ತಾಯಿ ತಂದೆಯರ ಮರಣ; ಪತ್ನಿ ಪುತ್ರರಿಂದ ದೂರಾಗುವುದು ರೋಗಗಳ ಪೀಡೆ, ಮನೆಯಲ್ಲಿ ನೆಮ್ಮದಿ ಭಂಗ, ಮೇಲಧಿ=ಕಾರಿಗಳಿಂದ ಉಪದ್ರವ, ಹಲ್ಲು, ಕಣ್ಣುಗಳ ರೋಗ, ತನ್ನ ದೇಹದ ನೆರಳಿನಲ್ಲಿ ವಿಕಾರತೆ, ದ್ರುವಾದಿ ನಕ್ಷತ್ರಗಳು ಕಾಣದೆ ಹೋಗುವುದು, ಭೂತ ಪಿಶಾಚಿಗಳ ದರ್ಶನವಾಗುವುದು ಮುಂತಾದ ಬಾಧೆಗಳು ಅಥವಾ ಭಯಗಳು ಸಂಭವಿಸುವ ಸಾಧ್ಯತೆ ಇದೆ ಅದರ ನಿವಾರಣೆಗಾಗಿ 60ನೇ ವರ್ಷದಲ್ಲಿ ಉಗ್ರರಥ ಶಾಂತಿ ಹೋಮ ಮಾಡುವುದು ಉಚಿತ.

ಯೌವನ ಕಳೆದು ಮುದಿತನದ ಹೊಸ್ತಿಲಲ್ಲಿ ನಿಂತ ಮನುಷ್ಯ, ದೇಹದಿಂದ ದುರ್ಬಲನಾಗುತ್ತಾನೆ. ಮನಸ್ಸಿನಲ್ಲಿ ಅಧೈರ್ಯ ತುಂಬುತ್ತದೆ. ಇಂದ್ರಿಯಗಳ ಶಕ್ತಿ ಕುಗ್ಗುತ್ತದೆ. ಆಗ ತನಗೆ ಸಹಾಯ ಮಾಡತಕ್ಕ ದೇವತಾ ಶಕ್ತಿಯನ್ನು ನೆನೆಯಬೇಕು–ಆರಾಧಿಸಬೇಕು. ಜೀವನದ ದೀರ್ಘಾವಧಿಯಲ್ಲಿ ಪಾಪಗಳು ನಡೆದಿದ್ದರೆ ಅವುಗಳ ಪರಿಹಾರ ಆಗಬೇಕು ಮುಂದೆ ಎಂದೋ ಸಂಭವಿಸುವ ಪರಲೋಕ ಪ್ರಯಾಣಕ್ಕೆ ಪಾಪಗಳು ಅಡ್ಡಿಯಗಬಾರದು. ತನ್ನ ನಂತರ ಉಳಿದ ಪುತ್ರ ಪೌತ್ರರು ಸುಖವಾಗಿ ಬಾಳಬೇಕು. ಕೂಡಿಟ್ಟ ಸಂಪತ್ತು ಆದಷ್ಟು ದಾನವಾಗಿ ವಿನಿಯೋಗವಾಗಬೇಕು. ಇವೆಲ್ಲ ಉದ್ದೇಶಗಳಿಂದ ಶಾಂತಿ ಕರ್ಮಗಳನ್ನು ಆಚರಿಸುವಾಗ ಆಯಾ ದೇವತೆಗಳ ಮಂತ್ರ–ಜಪ ಹೋಮಗಳನ್ನು ನಡೆಸಬೇಕು. ಗೋದಾನ – ಭೂದಾನ ಸ್ವರ್ಣದಾನ – ಅನ್ನದಾನಗಳಿಂದ ಬ್ರಾಹ್ಮಣರನ್ನು, ಕುಟುಂಬಿಕರನ್ನು , ನೆಂಟರಿಷ್ಟರನ್ನು ಸಂತೋಷ ಪಡಿಸಬೇಕು ಯಜಮಾನನಿಗೆ ಮಾತ್ರವಲ್ಲ ಇಡೀ ಕುಟುಂಬಕ್ಕೆ ಶಾಂತಿ ಹೋಮದ ಫಲ ಸಿಗುತ್ತದೆ.

ಉಗ್ರರಥ ಶಾಂತಿಯಲ್ಲಿ ಮಾರ್ಕಾಂಡೇಯನು ಪ್ರಧಾನ ದೇವತೆ ಸಪ್ತಕಲ್ಪಗಳ ಕಾಲ ಚಿರಂಜೀವಿಯಾಗಿ ಇರುವ ಮಹರ್ಷಿಗಳಿವರು ಅಲ್ಲದೆ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ ವಿಭೀಷಣ,ಕೃಪ ಮತ್ತು ಪರಶುರಾಮ ಈರೀತಿ ಇಲ್ಲಿ ಸಪ್ತ ಚಿರಂಜೀವಿಗಳಿಗೂ ಆರಾಧನೆ ನಡೆಯುತ್ತದೆ ಆದಿತ್ಯಾದಿ ನವಗ್ರಹಗಳ ಪ್ರೀತ್ಯರ್ಥವಾಗಿ ಹೋಮ ನಡೆಯುತ್ತದೆ. ಅಲ್ಲದೆ ಮೃತ್ಯು ಭಯ ನಿವಾರಣೆಗಾಗಿ ಮೃತ್ಯುಂಜಯ ಹೋಮವನ್ನು ನಡೆಸಬೇಕು ವೇದ ಮಂತ್ರಗಳ ಪಾರಾಯಣ ನಡೆಯಿಸಿ ದಶ ದಾನಗಳನ್ನು ನೀಡಬೇಕು. ದೇವರಿಗೆ ಮಂಗಳಾರತಿ ಮಾಡಿ ವಂದಿಸಬೇಕು. ಬ್ರಾಹ್ಮಣರಿಗೆ ಬಂಧುಗಳಿಗೆ ಯಥೇಚ್ಛ ಭೋಜನ ನೀಡಬೇಕು ಈ ರೀತಿ ಆಚರಿಸಿದಲ್ಲಿ ದೀರ್ಘಾಯುಷ್ಯ ಪ್ರಾಪ್ತಿ ಸರ್ವ ಅರಿಷ್ಟಗಳ ವಿನಾಶ, ಸಕಲ ಸಂಪತ್ತುಗಳ ಲಾಭ ಸಿಗುತ್ತದೆ ಎಂದಿದ್ದಾರೆ ಶೌನಕರು.

# ಕನ್ನಡ ಕವಿಕಾವ್ಯ ಪರಿಚಯ–೬ : ಶಿವಕೋಟ್ಯಾಚಾರ್ಯ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ. 10ನೇ ಶತಮಾನವು ಸಾಹಿತ್ಯದ ದೃಷ್ಟಿಯಿಂದ ಒಂದು ಸುವರ್ಣ ಯುಗವೆನ್ನಬಹುದು. ಅನೇಕ ಮಂದಿ ಜೈನ ವಿದ್ವಾಂಸರು ಈ ಕಾಲದಲ್ಲಿ ಕಾವ್ಯ ರಚನೆಯನ್ನು ಮಾಡಿ ಮಹಾ ಕವಿಗಳೆನಿಸಿದ್ದಾರೆ. ಕವಿರಾಜ ಮಾರ್ಗಕಾರನಾದ ನೃಪತುಂಗನ ನಂತರ ಇದೇ ಯುಗದಲ್ಲಿ ಕನ್ನಡದ ಆದಿಕವಿಯೆನಿಸಿರುವ ಪಂಪ, ಅವನ ಹೆಸರೂ ಸೇರಿದಂತೆ ಇರುವ ಕವಿರತ್ನತ್ರಯ 'ರೆನಿಸಿದ ರನ್ನ ಮತ್ತು ಪೊನ್ನ ಇವರುಗಳೂ ಇದೇ ಯುಗಕ್ಕೆ ಸೇರಿದವರು. ಇವರು ಸಾಲಿನಲ್ಲಿಯೇ ಪ್ರಸಿದ್ಧನಾದ ಇನ್ನೊಬ್ಬ ಕವಿಯೇ ಶಿವಕೋಟ್ಯಾಚಾರ್ಯ. ಸುಮಾರು ಕ್ರಿ.ಶ.920 ಈತನ ಜೀವಿತದ ಕಾಲವು. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯ ಕೋಗಳಿ ಎಂಬ ಪ್ರದೇಶವು ಈ ಕವಿಯು ಜೀವಿಸಿಕೊಂಡಿದ್ದ ಊರು. ಈತನು ಜೈನ ಕವಿ. ಈ ಯುಗವೇ ಪಂಪ, ರನ್ನ,ಪೊನ್ನರುಗಳಿಂದಾಗಿ ಜೈನ ಸಾಹಿತ್ಯ ಯುಗವೆಂದು ಕರೆಯಲ್ಪಡುತ್ತದೆ. ಜೈನ ಪರಂಪರೆಯಲ್ಲಿ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ನೀತಸಂಹಿತೆಯನ್ನೂ, ಸಮಾಜದ ಧರ್ಮವನ್ನೂ, ಮಾನವೀಯ ಮೌಲ್ಯಗಳನ್ನೂ ಪ್ರತಿಪಾದಿಸಿ ಪ್ರಚುರ ಪಡಿಸುವ ಗ್ರಂಥವೇ ಹಳೆಗನ್ನಡ ಗದ್ಯದಲ್ಲಿ ರಚಿಸಲ್ಪಟ್ಟ 'ವಡ್ಡಾರಾದನೆ' ಎಂಬುದು. ಈ ಕೃತಿಯು ಸಾಮಾನ್ಯ ಪೂರ್ವದ ಹಳೆಗನ್ನಡದ ಗದ್ಯ ಶೈಲಿಯಲ್ಲಿದೆ. ಉದಾ:– ಹಳೆಗನ್ನಡದ 'ಎಂಬಂ' ಶಬ್ದವು ಪೂರ್ವದ ಹಳೆಗನ್ನಡದಲ್ಲಿ 'ಎಂಬೊಂ' ಎಂದಾಗುತ್ತದೆ. ಹೀಗೆಯೇ 'ಪೂರ್ವದ ಹಳೆಗನ್ನಡ' ದಲ್ಲಿ ಕೆಲವು ವಿಭಕ್ತಿ ಪ್ರತ್ಯಯಗಳ ರೂಪವು ಬೇರೆಯೇ ಆಗಿದ್ದುದನ್ನು ಕಾಣುತ್ತೇವೆ 'ವಡ್ಡ' ಎಂಬುದು 'ವೃದ್ಧ' ಎಂಬ ಪದರ ತದ್ಭವ ರೂಪವಾಗಿದೆ. 'ವೃದ್ಧರ' ಅಥವಾ 'ಹಿರಿಯ'ರ ಪೂಜೆ ಎಂಬ ಅರ್ಥದಲ್ಲಿ ಈ ಗ್ರಂಥವನ್ನು ರಚಿಸಲಾಗಿದೆ. ಈ ಗ್ರಂಥದಲ್ಲಿ ಒಟ್ಟು 19 ಕಥೆಗಳಿವೆ ಹಿರಿಯರಿಗೆ, ಜ್ಞಾನಿಗಳಿಗೆ, ಜೈನ ಯತಿಗಳಿಗೆ ಕೊಡುವ ಗೌರವವೇ ಈ ಕಥೆಗಳ ರೂಪದಲ್ಲಿದೆ. ಕವಿ ಶಿವಕೋಟ್ಯಾಚಾರ್ಯನು ಈ ಕಥೆಗಳನ್ನೆಲ್ಲಾ ಸಂಕಲನಗೊಳಿಸಿ ಕಾವ್ಯದ ರೂಪವನ್ನು ಕೊಟ್ಟಿರುವನು. ಕುಮಾರಸ್ವಾಮಿಯ ಕತೆ, ಸುಧಾಮನ ಕತೆ, ಸುಮತಿಯ ಕತೆ– ಇವುಗಳೆಲ್ಲ ಇದರಲ್ಲಿ ಪ್ರಮುಖವಾದ ಕತೆಗಳಾಗಿವೆ. ಲೌಕಿಕ ಆಕರ್ಷಣೆಗಳನ್ನು ಮೀರಿದ ತಪಸ್ವಿಗಳೇ ವೃದ್ಧರು ಇಂಥ ತಪಸ್ವಿಗಳ ತಪಸ್ಸಿಗೆ ಅಡ್ಡಿಯಾಗುವ ತೊಂದರೆಗಳೇ ಉಪಸರ್ಗಗಳು. ಉಪಸರ್ಗಗಳನ್ನು ಸಹಿಸಿ ಮೋಕ್ಷದ ಆಕಾಂಕ್ಷೆಯಿಂದ ಕೈಗೊಳ್ಳುವ ಉಪಾಸನೆಯೇ ಆರಾಧನೆ, ಈ ಬಗೆಯ ಆರಾಧನೆಗಳನ್ನು ವಿವರಿಸುವಾಗ ದೃಷ್ಟಾಂತಗಳಾಗಿ ಕಥೆಗಳು ರಚನೆಯಾದವು. ಈ ಕಥೆಗಳ ಕೋಶವೇ 'ವಡ್ಡಾರಾಧನೆ' ಯೆನಿಸಿತು. ಇಂದಿಗೂ ಇದೊಂದು ಉತ್ತಮವಾದ ಮಾದರಿಯ ಗದ್ಯಕೃತಿ ಇದುವೇ ಕನ್ನಡದ ಮೊದಲ ಗದ್ಯ ಗ್ರಂಥವೂ ಆಗಿದೆ.

## ಸಮುದಾಯ ಸಂರಕ್ಷಣೆ, ಸಮಾಜ ಹಿತಚಿಂತನೆ (ಬ್ರಾಹ್ಮಣ ಜಾಗೃತಿ ಸಮ್ಮೇಳನದಲ್ಲಿ ಪೇಜಾವರ ಶ್ರೀ ಆಶಯ) (....1ನೇ ಪುಟದಿಂದ)

ಇಂದು ಅನೇಕ ಸವಾಲು ಎದುರಿಸುತ್ತಿದ್ದು, ಅವುಗಳನ್ನು ಸಮರ್ಥವಾಗಿ ಎದುರಿಸಿ ಮುನ್ನಡೆಯ ಬೇಕಾಗಿದೆ ಎಂದು ಅವರು , ಕರಾವಳಿಯ ಬ್ರಾಹ್ಮಣ ಸಮಾಜ ಜಾಗೃತಿಯ ಮೂರ್ತ ಸ್ವರೂಪವಾಗಿ ಈ ಸಮ್ಮೇಳನ ಆಯೋಜನೆಗೊಂಡಿದೆ. ವಿವಿಧ ತತ್ತ್ವ ಸಂಪ್ರದಾಯ, ವರ್ಗವನ್ನು ಒಗ್ಗೂಡಿ ಬ್ರಾಹ್ಮಣ ಸಮಾಜದಲ್ಲಿ ಏಕತೆ ಮೂಡಿಸಿ ವಿಶೇಷ ಕಾರ್ಯೋತ್ಸಾಹ ಮೂಡಿಸುವಲ್ಲಿ ಸಮ್ಮೇಳನ ಯಶಸ್ವಿಯಾಗಲಿ ಎಂದು ಅವರು ಹಾರೈಸಿದರು.

**ಸ್ವಾವಲಂಬಿ ಸಶಕ್ತ ಬದುಕು**

ಅತಿಥಿಯಾಗಿದ್ದ ವಿದ್ವಾಂಸ ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರು, ಬ್ರಾಹ್ಮಣರಲ್ಲಿ ನಮ್ಮತನದ ಬಗ್ಗೆ ಜಾಗೃತಿ ಮೂಡಬೇಕಾಗಿದೆ ಸ್ವಾವಲಂಬಿ ಸಶಕ್ತ ಬದುಕು ಕಂಡುಕೊಳ್ಳುವ ವಾತಾವರಣ ನಿರ್ಮಾಣವಾಗಬೇಕಾಗಿದೆ ಎಂದರು. ಹಿರಿಯ ವಕೀಲ ಎಚ್.ಸುಬ್ರಹ್ಮಣ್ಯ ಜೋಶಿ, ಕರ್ಣಾಟಕ ಬ್ಯಾಂಕ್ ಆಡಳಿತ ನಿರ್ದೇಶಕ ಪಿ. ಜಯರಾಮ ಭಟ್, ಚೆನ್ನೈಯ ಎಸ್‌ಕೆಡಿಬಿ ಅಸೋಸಿಯೇಶನಿನ ಅಧ್ಯಕ್ಷ ಕೆ. ಮುರಳಿ ರಾವ್, ಅಡಿಗಾಸ್ ಗ್ರೂಪ್ ಆಫ್ ಹೋಟೆಲ್ಸ್‌ನ ಮುಖ್ಯಸ್ಥ ಕೆ. ಎನ್ ವಾಸುದೇವ ಅಡಿಗ, ಸುನಂದಾ ಸದಾನಂದ ಮಯ್ಯ, ಶಾರದಾ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಪ್ರೊ। ಎಂ.ಬಿ. ಪುರಾಣಿಕ್ ಅತಿಥಿಗಳಾಗಿದ್ದರು. ಸ್ವಾಗತಿಸಿ ಪ್ರಸ್ತಾವನೆಗೈದ ಅಧ್ಯಕ್ಷ ಎಸ್. ಪ್ರದೀಪ್ ಕುಮಾರ್ ಕಲ್ಕೂರ ಅವರು ಸಮ್ಮೇಳನದ ಧ್ಯೇಯೋದ್ದೇಶ ವಿವರಿಸಿದರು. ಗೌರವಾಧ್ಯಕ್ಷ ಹರಿಕೃಷ್ಣ ಪುನರೂರು, ಕೋಶಾಧಿಕಾರಿ ಶರವು ರಾಘವೇಂದ್ರ ಶಾಸ್ರಿ ಉಪಾಧ್ಯಕ್ಷರಾದ ವಿಜಯರಾಘವ ಪಡುವೆಟ್ನಾಯ, ಎಂ.ಬಿ ಮುಳಿಯ ಪೊಯ್ಯಗದ್ದೆ ವೆಂಕಟರಾವ್, ನೇರಂಬಳ್ಳಿ ನಾರಾಯಣ ರಾವ್, ಪಿ.ಎಲ್.ಉಪಾಧ್ಯಾಯ, ಸಿ.ಎಸ್. ರಾವ್, ಡಾ। ಪ್ರಭಾಕರ ಜೋಶಿ, ವೇ। ಮೂ। ನಾರಾಯಣ ಭಟ್, ಎಚ್.ಎಸ್. ಸುರೇಂದ್ರ ಬೆಂಗಳೂರು ಹಾಗೂ ಪಿ.ಎನ್. ರಾಜರಾಂ ಉಪಸ್ಥಿತರಿದ್ದರು. ಜೆ.ಕೆ. ಭಟ್ ಸೇರಾಜೆ ವಂದಿಸಿದರು ಮನೋಹರ್ ಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

**ಜಾಗೃತಿ, ಚಿಂತನೆ, ಮಾರ್ಗದರ್ಶನ : 'ಸ್ವಸಂವೇದನೆ, ಸಂಘಟನೆ, ಸಂವರ್ಧನೆ, ಸಂರಕ್ಷಣೆ' ಧ್ಯೇಯವಾಕ್ಯದೊಂದಿಗೆ ಆಯೋಜಿಸಲಾಗಿದ್ದ ಬ್ರಾಹ್ಮಣ ಜಾಗೃತಿ ಸಮಾವೇಶದಲ್ಲಿ ಶಿವಳ್ಳಿ ಹವ್ಯಕ, ಕೋಟ, ಸ್ಥಾನಿಕ, ಕೋಟೇಶ್ವರ, ಚಿತ್ಪಾವನ, ಕರ್ಹಾಡ, ದೇಶಸ್ಥ ಇತ್ಯಾದಿ ವರ್ಗದ ಬ್ರಾಹ್ಮಣರು ಭಾಗವಹಿಸಿದ್ದರು. ಸಮ್ಮೇಳನಾಧ್ಯಕ್ಷರನ್ನು ವಾದ್ಯ, ಚೆಂಡೆ, ಸಾಂಸ್ಕೃತಿಕ ವೈಭವದೊಂದಿಗೆ ಸಮಾವೇಶಕ್ಕೆ ಕರೆತರಲಾಯಿತು ಸಮಾವೇಶ ಆರಂಭಕ್ಕೆ ಮುನ್ನ ಗಣಹೋಮ, ಗೋಪೂಜೆ ನೆರವೇರಿಸಲಾಯಿತು. ಬೆಳಗ್ಗೆ 6ರಿಂದ ಉದಯರಾಗ, ನಾದ ಸಂಗೀತ ವೈಭವ ಹಾಗೂ ಸಂಜೆ 6 ರಿಂದ ನಾದ, ತಾಳ, ಲಯ, ನೃತ್ಯ, ಯಕ್ಷಗಾನ ವೈಭವ ಜರಗಿತು. ವಿವಿಧ ವಿಚಾರಗಳಿಗೆ ಸಂಬಂಧಪಟ್ಟಂತೆ ಚಿಂತನೆ ಮತ್ತು ಮಾರ್ಗದರ್ಶನ ಗೋಷ್ಠಿ ಸಾಧಕರಿಗೆ ಸಮ್ಮಾನ ನಡೆಯಿತು. ರಾಷ್ಟ್ರ ಗೌರವ ಸಂರಕ್ಷಣಾ ಪರಿಷತ್ ವತಿಯಿಂದ ಪ್ರದರ್ಶಿಸಲ್ಪಟ್ಟ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ವಿಪ್ರ ಹೋರಾಟಗಾರರ ಪ್ರದರ್ಶನ ಗಮನ ಸೆಳೆಯಿತು. ಮಹಿಳೆಯರು ಸೇರಿದಂತೆ ಸಹಸ್ರಾರು ಮಂದಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ವಸ್ತುಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿತ್ತು.**

# ಶ್ರೀ ಮಠಾಮ್ನಾಯ ಸ್ತೋತ್ರ ಮತ್ತು 4 ಶ್ರೀ ಮಠಗಳ ಆಮ್ನಾಯಾದಿ ಪರಿಚಯ

ಮುಕ್ಕ ಸಾಂತೂರು
ಪಾ.ಸು.ಶರ್ಮಾ ಬೆಂಗಳೂರು

ಈ ಕಿರುಲೇಖನವನ್ನು ವಿಶ್ರಾಂತಿಯಲ್ಲಿರುವ ಪ್ರೊ॥ ಡಾ॥ಎಚ್.ವಿ.ನರಸಿಂಹ ಮೂರ್ತಿಗಳು ದಕ್ಷಿಣಾಮ್ನಾಯ, ಶ್ರೀ ಶಾರದಾ ಪೀಠಾಧೀಶ್ವರ, ಪರಮಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾ ಸ್ವಾಮಿಗಳವರಿಗೆ 60 ವರ್ಷ ವಯಸ್ಸು ಪೂರ್ಣಗೊಂಡ ಶುಭ ಸಂದರ್ಭದಲ್ಲಿ ಸಮರ್ಪಿಸಲಾದ "ಶೃಂಗೇರಿ ಶ್ರಿ ಶಾರದಾ ಪೀಠ" ಎಂಬ ನಾಮದ ಪುಸ್ತಕದ 181 ನೇ ಪುಟದಲ್ಲಿರುವ "ಶ್ರೀ ಮಠಾಮ್ನಾಯ ಸ್ತೋತ್ರಂ" ಅವಲೋಕಿಸಿ ಬರೆಯಲಾಗಿದೆ ಅದಕ್ಕಾಗಿ ಲೇಖಕನು ಡಾ. ಮೂರ್ತಿಗಳಿಗೆ ತುಂಬಾ ಋಣಿಯಾಗಿರುವನು.

"ಶ್ರೀ ಮಠಾಮ್ನಾಯಸ್ತೋತ್ರಂ"? ಎಂಬುದರಲ್ಲಿ ಸ್ತೋತ್ರ (ಹೊಗಳುವಿಕೆ) ಮಾಡಿದ್ದು 3–4 ಶಬ್ದಗಳು ಮಾತ್ರ ಕೊನೆಯಲ್ಲಿ ಕಾಣುತ್ತವೆ. ಅದರ ಮೊದಲೆಲ್ಲಾ ಮಠಗಳ ಸಂಜ್ಞೆ, ಕ್ಷೇತ್ರಾಭಿಧಾನ , ದೇವತಾಭಿಧಾನ ಆದಿ ಉಕ್ತವಾಗಿವೆ. ಇದನ್ನು ಆದಿ ಶಂಕರರು ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪನೆಮಾಡಿದ ಕೆಲವರ್ಷಗಳ ನಂತರ, ಯಾರೋ ಅವರ ಶಿಷ್ಯರಲ್ಲೊಬ್ಬರು ರಚಿಸಿದ್ದಾಗಿರಬೇಕು. ಶ್ರೀಮಠಾಮ್ನಾಯ ಸ್ತೋತ್ರ ? ದಲ್ಲಿ ಹೇಳಲಾದ ವಿಷಯಗಳಲ್ಲಿ ಕ್ರಮಬದ್ಧತೆ ಅಷ್ಟೊಂದು ಸರಿ ಎಂದು ಒಟ್ಟಾರೆ ಓದುವಾಗ ಕಾಣುವುದಿಲ್ಲ. ಉದಾ: ಮೊದಲು ಪೂರ್ವದಿಕ್ಕಲ್ಲಿ ಸ್ಥಾಪಿತ, ಶ್ರೀಮಠ ಗೋವರ್ಧನ ಮಠದ ಆಮ್ನಾಯಾದಿ ಪರಿಚಯ ಲೇಖಿಸುವ ಬದಲು, ಪಶ್ಚಿಮ ದಿಕ್ಕಲ್ಲಿ ಸ್ಥಾಪಿತವಾದ, ದ್ವಾರಕಾ ಮಠದ ಕ್ಷೇತ್ರ ನಾಮ ಆದಿ ಲೇಖಿಸಿರುವರು. ಪೂರ್ವ ದಿಕ್ಕಿನ ಶ್ರೀ ಮಠ, ಗೋವರ್ಧನ ಮಠದ ನಂತರ ಉತ್ತರ ದಿಕ್ಕಿನ ಬದರಿಕಾಶ್ರಮ ಶ್ರೀಮಠದ ದೇವತಾನಾಮ, ಮೊದಲಾದುವನ್ನು ಬರೆದಿರುವರು. ಆದಾದ ನಂತರ ದಕ್ಷಿಣ ದಿಕ್ಕಿನಲ್ಲಿ ಸ್ಥಾಪನೆ ಗೈಯ್ಯಲಾದ ಶೃಂಗೇರಿ ಶ್ರೀ ಶಾರದಾ ಮಠದ ದೇವತಾಭಿಧಾನ ಆದಿ ಕುರಿತು ಬರೆದಿರುವರು.

ಹೀಗೆ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ದಿಗಿಕ್ರಮದ ಬದಲು, ಪಶ್ಚಿಮ, ಪೂರ್ವ, ಉತ್ತರ, ದಕ್ಷಿಣ, ದಿಕ್ಕುಗಳಲ್ಲಿ ಸ್ಥಾಪಿಸಲ್ಪಟ್ಟರುವ, ಕಾಲಿಕಾಮಠ ಪಶ್ಚಿಮ (ದ್ವಾರಕಾಕ್ಷೇತ್ರ), ಗೋವರ್ಧನ ಮಠ (ಪೂರ್ವ), ಉತ್ತರದಲ್ಲಿ ಶ್ರೀಮಠ, ಶ್ರೀ ಶಾರದಾ ಮಠ (ದಕ್ಷಿಣದಲ್ಲಿ) ನಿರ್ಮಿಸಲ್ಪಟ್ಟಿದ್ದಾಗಿ ಬರೆದಿದೆ. ಮೂಲ ಸ್ತೋತ್ರದಲ್ಲಿ ಮಠನಾಮಾದಿಗಳ ಲೇಖನ ಕ್ರಮ ಈ ತರಹ ಇದ್ದರೂ, ವರ್ತಮಾನ ಕಾಲದಲ್ಲಿ ಅದನ್ನು ಅಧ್ಯಯಿನಿಸುತ್ತಿರುವ. ನಾನು ಮೊದಲು ಸ್ಥಾಪಿತ ಶೃಂಗೇರಿ ಮಠದಿಂದ ಆರಂಭಿಸಿ ಎಂದು ಚಿಂತಿಸಿ ಬರೆದಿರುವೆ ಹಿಂದೆ ಈ ದೇಶವನ್ನು "ಉತ್ತರಾ ಪಥ" ಮತ್ತು "ದಕ್ಷಿಣಾಪಥ" ಎಂದು ಸ್ಥೂಲರೀತ್ಯಾ ವಿಭಾಜಿಸುವ ಕ್ರಮ ಇತ್ತು. ಅದು ಆಯುರ್ವೇದದ ಅಷ್ಟಾಂಗಗಳಲ್ಲೊಂದಾದ, ಶಲ್ಯ ತಂತ್ರಾ (ಸರ್ಜರಿ) ಒಗಿಕ್ಕಿದುವ ಮೂಲ ಸಂಹಿತೆ ಸುಶ್ರುತ ಸಂಹಿತೆಗೆ "ಡಲ್ಹಣ" ಎಂಬ ವೈದ್ಯ ವಿದ್ವಾಂಸರು ಬರೆದಿರುವ, ಸಂಸ್ಕೃತ ವ್ಯಾಖ್ಯಾನದಲ್ಲಿ ಓದ ಸಿಗುವುದು. ಅವರು ಕೆಲವು ಕಡೆ ಉಪಯೋಗಿಸಲ್ಪಟ್ಟ ಔಷಧಿಗಳ ಲಭ್ಯತೆ ಪರಿಚಯ ಹೇಳುವಾಗ "ಇದಂ ದಕ್ಷಿಣಾಪಥೆಪ್ರಸಿದ್ಧಂ" ತಥಾ "ಇದಂ ಉತ್ತರಾ ಪಥೆ ಪ್ರಸಿದ್ಧಂ" ಎಂದು ಉಲ್ಲೇಖಿಸಿರುವರು. ಹೀಗೆ ಸ್ಥೂಲ ರೀತಿಯಲ್ಲಿ ಭಾರತ ದೇಶವನ್ನು ವಿಭಜಿಸಿದ್ದು ಕಾಣುವುದರಿಂದ , ಶೃಂಗೇರಿ ಕ್ಷೇತ್ರವು ಭಾರತವರ್ಷದ ದಕ್ಷಿಣಾ ಪಥದಲ್ಲಿ ಬರುವುದು. ಇಲ್ಲಿ ಆದಿಶಂಕರಾಚಾರ್ಯರು ತನ್ನ ಮೊದಲ ಪೀಠ " ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠವನ್ನು ಸ್ಥಾಪಿಸಿದರು. ಶ್ರೀ ಶೃಂಗೇರಿ ಕ್ಷೇತ್ರವು ಆದಿ ಕಾವ್ಯ ಶ್ರೀ ಮದ್ರಾಮಯಣದ ಕಾಲದಿಂದಲೂ ಎಂದು ಪ್ರಸಿದ್ಧವಾದ ಕ್ಷೇತ್ರ. ಈ ಕ್ಷೇತ್ರದ ಕುರಿತು ಆದಿಕವಿ ಶ್ರೀ ವಾಲ್ಮೀಕಿ ಮಹರ್ಷಿಷಿಗಳು, ಕಶ್ಯಪ ಮಹರ್ಷಿಗಳ ಪುತ್ರ ವಿಭಾಂಡಕ ಮಹರ್ಷಿಗಳು ತಪಸ್ಸು ಮಾಡುತ್ತಿದ್ದ ವಿಷಯ ಆದಿಗಳ ವರ್ಣನೆ ಬರೆದದ್ದೂ ಓದ ಸಿಗುವುದು. ಅದರಂತೆ ಶ್ರೀ ಮಠಾಮ್ನಾಯ ಸ್ತೋತ್ರದ 15 ನೇ ಶ್ಲೋಕದಲ್ಲಿಯೂ ಶೃಂಗೇರಿ ಶ್ರೀ ಮಠದ ಆಮ್ನಾಯಾದಿ ಹೇಳ ತೊಡಗುವ ಮೊದಲು ಇಲ್ಲಿ ವಿಭಾಂಡಕ ಮಹರ್ಷಿಗಳು ಪೂಜಿಸುತ್ತಿದ್ದ ಮಲಹಾನಿಕರಲಿಂಗ ಇರುವುದು. ಹಾಗೆ ಋಷ್ಯಶೃಂಗ ಮಹರ್ಷಿಗಳು ತಪಸ್ಸಾಚರಿಸುತ್ತಿದ್ದ ಬಹು ದೊಡ್ಡ ಆಶ್ರಮವೂ ಇರುವುದು" ಎಂದುಬರೆದಿರುವರು

ಶೃಂಗೇರಿ ಶಾರದಾ ಮಠದ ಆಮ್ನಾಯಾದಿ ಪಟ್ಟಿ

1. ಕ್ಷೇತ್ರ ನಾಮ..... ಶೃಂಗೇರಿ
2. ಮಠದ ಹೆಸರು..... ಶಾರದಾ ಮಠ
3. ದೇವತೆ...... ವರಾಹ ದೇವತೆ (ಸ್ತ್ರೀ) ವಾರಾಹೀ ಎಂದಾಗಬೇಕು. (ಕ್ಷೇತ್ರ ಶಿರೋನಾಮೆ ಮೇಲೆ ಒಮ್ಮೆ ಬಂದಿದೆ) ರಾಮ ಇದು ನಾಮಾಂತರವಾಗಿದೆ.
4. ತೀರ್ಥ..... ತುಂಗಭದ್ರಾ ಎಂಬುದರಬದಲು ತುಂಗಾನದ್ಯಾ ಎಂದಾಗ ಬೇಕೋ ಏನೋ (ತುಂಗಾನದಿಯು ವರಾಹ ಪರ್ವತದಲ್ಲಿ ಹುಟ್ಟಿ, ಶೃಂಗೇರಿಯ ನೈರುತ್ಯ ದಿಕ್ಕಿನಿಂದ ಈಶಾನ್ಯದಿಕ್ಕಿನತ್ತ ಹರಿದು ಮತ್ತೊಂದು ದಿಕ್ಕಿನಿಂದ ಪ್ರವಹಿಸಿ ಬರುವ "ಭದ್ರೆ"ನದಿಯೊಂದಿಗೆ ಶೀಘ್ರದಲ್ಲೇ ಜತೆಗೂಡಬೇಕೆಂದು ಒಂದು ನೂರು ಕಿ.ಮೀ.ನಷ್ಟು ಕ್ರಮಿಸಿ ತಿರುಮಲ ಕೂಡ ಎಂಬಲ್ಲಿ ಮಿಲನಗೊಂಡ ನಂತರ "ತುಂಗಭದ್ರ" ಎಂದು ನಾಮ ಪಡೆಯುತ್ತದೆ. ಅದರ ಮೊದಲು "ತುಂಗಾನದಿ" ಎಂದೇ ಹೆಸರು ಇರುತ್ತದೆ. ಆದುದರಿಂದ 'ತುಂಗಭದ್ಯಾಖ್ಯಂ' ಎಂಬ ಪಾಠದ ಬದಲು "ತುಂಗಾನದ್ಯಾಖ್ಯಂ" ಎಂಬ ಪಾಠಾಂತರ ಮಾಡುವುದು ಯುಕ್ತ. ಬೇರೊಂದು ಸಂದರ್ಭದಲ್ಲೂ ಸಹ "ತುಂಗಾತೀರ ನಿವಾಸಿ" ಎಂದೇ ಬರೆದು ಕಾಣುವುದು.)
5. ಶಕ್ತಿ.......ಶಾರದಾ (ಶಕ್ತಿ)
6. ಶೃಂಗೇರಿ ಶ್ರೀ ಮಠಕ್ಕೆ ನೇಮಕವಾಗುವ ಬ್ರಹ್ಮಚಾರಿಗಳ ಹೆಸರಿನ ಕೊನೆಗೆ ಬರುವ ಭಿನ್ನ ಅಭಿಧಾನ
7. ಸಂಪ್ರದಾಯ......ಭೂರವಾಲ!?
8. ಮಹಾವಾಕ್ಯ..... ಅಹಂಬ್ರಹ್ಮಾಸ್ಮಿ
9. ಆಮ್ನಾಯ(ವೇದ).....ಯಜುರ್ವೇದ

ಓಂ ಶ್ರೀ ಸಾಯಿ ರಾಂ

## ವೈವಾಹಿಕ ಜೀವನದ 35ನೇ ಸಂವತ್ಸರಗಳನ್ನು ಪೂರೈಸಿದಕ್ಕೆ ಶುಭಾಶಯಗಳು



**ಶ್ರೀ ಮಾಂಟ್ರಾಡಿ ಮೋಹನ್ ರಾವ್ ಮತ್ತು ಶ್ರೀಮತಿ ಕಬ್ಯಾಡಿ ಸವಿತಾ ರಾವ್**

ಶ್ರೀ ಸಾಯಿ ಕೃಪಾ ನಿಲಯಂ, ಪಾದೆಕಲ್ಲು ಲೇಔಟ್, ಕಕ್ಕುಂಜೆ, ಅಂಚೆ ಕುಂಜಿಬೆಟ್ಟು, ಉಡುಪಿ 576102 ದೂರವಾಣಿ 2580001

**ವೈವಾಹಿಕ ಜೀವನದ 35ನೇ ಸಂವತ್ಸರಗಳನ್ನು ಪೂರೈಸಿದ ಈ ಸಂದರ್ಭದಲ್ಲಿ ನಿಮಗೆ ಇನ್ನೂ ಹೆಚ್ಚಿನ ಸುಖ–ಸಂಪತ್ತು–ಆರೋಗ್ಯವನ್ನು ದೇವರು ಅನುಗ್ರಹಿಸಲಿ ಎಂದು ಬಯಸುವ,**

ಡಾ (ಶ್ರೀಮತಿ) ಪ್ರಶಾಂತಿ ಮತ್ತು ಶ್ರೀ.ಬಿ.ಎನ್ ವಾದಿರಾಜನ್, ಕಾರ್‌ಘರ್, ನವಿ ಮುಂಬಾಯಿ, ಮತ್ತು ಮೊಮ್ಮಗಳು ಹವನ
ಶ್ರೀಮತಿ ಪ್ರಥ್ವಿ ಮತ್ತು ಶ್ರೀ ಬಳ್ಳಮಂಜ ಎಸ್. ಸುರೇಶ್ ರಾವ್, ರಾಜಾಜಿನಗರ, ಬೆಂಗಳೂರು ಮತ್ತು ಮೊಮ್ಮಗ ಸೃಜನ್ ರಾವ್, ಸಾಯಿಕಿರಣ್ ದಾಸ್.
ಮಾಂಟ್ರಾಡಿ ಶ್ರೀಮತಿ ಲೀಲಾವತಿ ಅನಂತಕೃಷ್ಣ ರಾವ್ ಮಕ್ಕಳು ಮತ್ತು ಮೊಮ್ಮಕ್ಕಳು, ಉಡುಪಿ.
ಶ್ರೀಮತಿ ಸರೋಜಿನಿ ಸುಬ್ರಹ್ಮಣ್ಯ ಸ್ವಾಮಿ ಮಕ್ಕಳು ಮತ್ತು ಮೊಮ್ಮಕ್ಕಳು, ಉಡುಪಿ
ಶ್ರೀಮತಿ ಭಾರತಿ ಕುಮಾರಸ್ವಾಮಿ ಅಣ್ಣಾನಗರ ಚೆನ್ನೈ, ಮಗಳು ಅಳಿಯ ಮತ್ತು ಮೊಮ್ಮಗಳು.
ಶ್ರೀಮತಿ ಐ.ಕೆ. ಪ್ರಭಾವತಿ ಸದಾಶಿವ ರಾವ್, ಆರ್.ಕೆ. ನಗರ, ಚೆನ್ನೈ, ಮಕ್ಕಳು ಮತ್ತು ಮೊಮ್ಮಕಳು
ಮಾಂಟ್ರಾಡಿ ಶ್ರೀ ಶಶಿಕಾಂತ ರಾವ್ ಮತ್ತು ಶ್ರೀಮತಿ ಶೋಭಾ ಎಸ್.ರಾವ್, ದೊಡ್ಡಣಗುಡ್ಡೆ, ಉಡುಪಿ ಮತ್ತು ಮಕ್ಕಳು–ಮೊಮ್ಮಕ್ಕಳು.
ಶ್ರೀ ರಾಜೇಂದ್ರ ಪ್ರಸಾದ್ ಮತ್ತು ಶ್ರೀಮತಿ ಅನುಪಮ ರಾವ್ ಬಸವೇಶ್ವರ ನಗರ, ಬೆಂಗಳೂರು ಮಕ್ಕಳು ಮತ್ತು ಮೊಮ್ಮಗಳು.
ಶ್ರೀ ಶ್ರೀಕಾಂತ ರಾವ್ ಮತ್ತು ಶ್ರೀಮತಿ ಗೀತಾ ರಾವ್ ಮಡಗಾಂ ಗೋವಾ ಮಕ್ಕಳು ಮತ್ತು ಮೊಮ್ಮಗಳು
ಶ್ರೀಮತಿ ಪಿ.ಬಿ. ಗೀತಾ ಸುಬ್ರಮಣ್ಯ ರಾವ್, ಬಿ.ಟಿ.ಎಂ. ಲೇಔಟ್ ಬೆಂಗಳೂರು ಮತ್ತು ಮಗಳು ಸ್ವಪ್ನಾ

# ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ – ಡಾ.ಎ.ಪಿ.ಕೃಷ್ಣ

ಅಧ್ಯಕ್ಷರು, ವಿದ್ಯಾರ್ಥಿ ವೇತನ ಸಮಿತಿ, ಉಪಾಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

ನಮ್ಮ ಸ್ಥಾನಿಕ ಸಮಾಜದ ಯಾವುದೇ ಸಮಾವೇಶಕ್ಕೆ ಹೋದರೆ ಭಾಷಣಗಳಲ್ಲಿ ಕೇಳಿಬರುವ ‘ಹಿಂದೊಂದು ಕಾಲದಲ್ಲಿ ಸಮಾಜ ಬಹಳ ಉತ್ತುಂಗ ಸ್ಥಿತಿಯಲ್ಲಿ ಇತ್ತು, ಅದು ಯಾವುದೋ ಕಾರಣಗಳಿಂದ, ಇತರರ ಕಾಲ್ತುಳಿತಕ್ಕೆ ಸಿಲುಕಿ ತುಂಬಾ ಕೆಳಮಟ್ಟಕ್ಕೆ ತಳ್ಳಲ್ಪಟ್ಟಿತ್ತು’ ಎಂಬ ಒಂದು ಅಂಶ ಸಾಮಾನ್ಯ. ಈ ಮಾತುಗಳು ಚಾರಿತ್ರಿಕ ಸತ್ಯವಾಗಿರಲೂ ಬಹುದು. ಈ ಸಭೆಗಳಲ್ಲಿ ನಮ್ಮ ಹಿಂದಿನ ಗತವೈಭವವನ್ನು ಮೆಲುಕು ಹಾಕುತ್ತಾ ತಮ್ಮ ತಮ್ಮ ಬೆನ್ನು ತಟ್ಟಿಕೊಳ್ಳುವವರೇ ಹೆಚ್ಚು. ಇನ್ನು ಮುಂದೆ ಹೇಗೆ ಮುಂದೆ ಬರಬೇಕು, ಅದಕ್ಕೆ ಯಾವ ಕ್ರೀಯಾ ಯೋಜನೆಗಳನ್ನು ರೂಪಿಸಬೇಕು ಎಂಬ ಬಗ್ಗೆ ಸರಿಯಾದ ನಿಲುವುಗಳು ಇರುವುದಿಲ್ಲ. ಭಾಷಣದಲ್ಲಿ ಪ್ರಸ್ತಾಪಿಸಿದರೂ ಕ್ರಿಯಾರೂಪಕ್ಕೆ ತರುವ ಛಲವಿಲ್ಲ. ವಸ್ತು ಸ್ಥಿತಿ ಹೀರಿರುವಾಗ ನಮ್ಮ ಸಮಾಜದ ಕೆಲವು ಹಿರಿಯ ಚೇತನಗಳು ಈ ಸಮಸ್ಯೆಯನ್ನು ಶತಮಾನಗಳಷ್ಟು ಹಿಂದೆಯೇ ಕಂಡುಕೊಂಡು, ಅದಕ್ಕೆ ಸೂಕ್ತವಾದ ಪರಿಣಾಮಕಾರಿಯಾದ ಚಿಕಿತ್ಸಾಪದ್ಧತಿಯನ್ನು ರೂಪಿಸಿದರು. ಅದರ ಫಲವೇ ಇಂದು ಸ್ಥಾನಿಕ ಸಮಾಜ ಮತ್ತೊಮ್ಮೆ ತಲೆಯೆತ್ತಿ ನಿಂತಿದೆ.ಶ್ರೀ ಸುಬ್ರಹ್ಮಣ್ಯ ಸಭೆ ಸ್ಥಾಪಿಸುವ ಹೊತ್ತಿಗೆ ಸ್ಥಾನಿಕ ಸಮಾಜ ದಯನೀಯ ಸ್ಥಿತಿಯಲ್ಲಿತ್ತು. ಇದರಿಂದ ಉದ್ಧರಿಸಲು ಒಂದೇ ಮಾರ್ಗವೆಂದರೆ ವಿದ್ಯಾಭ್ಯಾಸ. Educate yourself or perish. ಈ ದೃಢ ಸಂಕಲ್ಪದಿಂದ ಶ್ರೀ ಸುಬ್ರಹ್ಮಣ್ಯ ಸಭೆಯನ್ನು ಹುಟ್ಟಿಹಾಕಿದರು. ಆಮೂಲಕ ಮುಂದಿನ ಜನಾಂಗಕ್ಕೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಒಂದು ಆಶ್ರಯಯೋಜನೆ (Hostel) ಮತ್ತು ಜತೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದರು. ಈ ಅಪ್ರತಿಮ ಪ್ರೋತ್ಸಾಹದಿಂದ ಉತ್ತೇಜಿತಗೊಂಡು, ಆ ಸಹಾಯದ ಸದುಪಯೋಗದಿಂದ ಒಂದು ತಲೆಮಾರಿನ ಜನ ದೊಡ್ಡ ಸಂಖ್ಯೆಯಲ್ಲಿ ತಮ್ಮ ಜೀವನದಲ್ಲಿ ಮುಂದೆ ಬಂದರು; ಇತರರನ್ನು ಮೇಲಕ್ಕೆತ್ತಿದರು. ಇಂದು ಸ್ಥಾನಿಕ ಸಮಾಜ ಪುನರುತ್ಥಾನಗೊಂಡು, ಇತರರೊಂದಿಗೆ ತಲೆಎತ್ತಿ ನಿಲ್ಲ ಬಲ್ಲರಾದರೆ ಅದಕ್ಕೆ ಪ್ರಬಲ ಕಾರಣ ವಿದ್ಯಾಭ್ಯಾಸ ಎನ್ನುವುದಲ್ಲಿ ಯಾವ ಅನುಮಾನವೂ ಇಲ್ಲ. ಇಂದು ಶ್ರೀ ಸುಬ್ರಹ್ಮಣ ಸಭೆ ತಮ್ಮ ಸಮಾಜದ ಕಿರಿಯರ ವಿದ್ಯಾಭ್ಯಾಸದ ಪ್ರಗತಿಗೆ ಸಾಕಷ್ಟು ಪ್ರಯತ್ನಿಸುತ್ತದೆ. ಸುಸಜ್ಜಿತವಾದ ವಸತಿ ನಿಲಯ, ದೂರದೂರದ ಹಳ್ಳಿಯಿಂದ ಬಂದು ಪೇಟೆಯಲ್ಲಿ ನಿಂತು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಬಹಳಷ್ಟು ವಿದ್ಯಾರ್ಥಿಗಳಿಗೆ ಅನುಕೂಲವನ್ನು ಕಲ್ಪಿಸುತ್ತದೆ. ಇದರ ಜತೆಗೆ ಮೆಡಿಕಲ್, ಇಂಜಿನಿಯರಿಂಗ್, ಸ್ನಾತಕೋತ್ತರ ಮತ್ತು ಇತರ ವೃತಿಪರ ವಿದ್ಯಾರ್ಥಿಗಳಿಗೆ ಗಣನೀಯವಾದ ಸಾಲ ವಿದ್ಯಾಭ್ಯಾಸ ನಿಧಿಯನ್ನು ಒದಗಿಸುತ್ತಿದೆ.BA,BSC, B.Com, BBM,BCA,ಇತ್ಯಾದಿ ಕಲಿಯುವ ವಿದ್ಯಾರ್ಥಿಗಳಿಗೂ PUC ಯ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನವನ್ನು ವಿತರಿಸುತ್ತಿದೆ. ಆ ಮೂಲಕ ಈ ವಿದ್ಯಾರ್ಥಿಗಳ ಖರ್ಚಿನ ಒಂದು ಸಣ್ಣ ಪಾಲನ್ನು ನಿಭಾಯಿಸುತ್ತಿದೆ. PUC ಯಿಂದ ಕೆಳಗಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವ ನಿಯಾಮಾವಳಿ ಶ್ರೀ ಸದನಕ್ಕೆ ಇಲ್ಲ. ಆದರೂ ಈ ಚಿಣ್ಣರು ಹಣದ ಕೊರತೆಯಿಂದಾಗಿ ವಿದ್ಯಾಭ್ಯಾಸದಿಂದ ವಂಚಿತರಾಗಬಾರದು ಎಂಬ ಕಾರಣದಿಂದ “Donor to studentîಎಂಬ Scheme ನ ಮೂಲಕ ಸಣ್ಣ ತರಗತಿಗಳಲ್ಲಿ ಕಲಿಯುತ್ತಿರುವ ಹಲವಾರು ಮಕ್ಕಳಿಗೆ ಸಹಾಯ ಕಲ್ಪಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಬಯಸುತ್ತೇನೆ. ವಿದ್ಯಾಭ್ಯಾಸ ನಿಧಿ ಸ್ಥಾಪಿಸಲು ಸಮಾಜದ ಬಹಳಷ್ಟು ಉದಾರಿ ದಾನಿಗಳು ಮುಂದೆ ಬುರುತ್ತಿದ್ದಾರೆ. ಇಂದೊಂದು ಸಂತೋಷದ ಸಂಗತಿ. ಈ ದಾನಿಗಳ ಹಿನ್ನೆಲೆಯನ್ನು ನೊಡಿದಾಗ ಕೆಲವು ವಿಷಯಗಳನ್ನು ಗಮನಿಸಬಹುದು.

ವರ್ಗ ಒಂದು: ತಾವು ಚಿಕ್ಕವರಿದ್ದಾಗ ಶ್ರೀ ಸುಬ್ರಹ್ಮಣ್ಯ ಸಭೆ ಅಥವಾ ಇನ್ನವುದಾದರೂ ಸಂಸ್ಥೆಯಿಂದ ತಮ್ಮ ವಿದ್ಯಾಭ್ಯಾಸಕ್ಕೆ ಪ್ರಯೋಜನ ಪಡೆಕೊಂಡು ಮುಂದೆ ಬಂದು ಇಂದು ಸಮಾಜದ ಉನ್ನತ ಮಟ್ಟಕ್ಕೆ ತಲಿಪಿದವರು. ಇವರಿಗೆ ಸಮಾಜದ ಋಣ ತೀರಿಸಬೇಕೆಂಬ ಹಂಬಲ.

ವರ್ಗ ಎರಡು: ತಾವು ಚಿಕ್ಕವರಿದ್ದಾಗ ತಮ್ಮ ವಿದ್ಯಾಭ್ಯಾಸದ ಖರ್ಚುವೆಚ್ಚಕ್ಕೆ ಯಾವುದೇ ಸಂಘಸಂಸ್ಥೆಗಳಿಂದ ಸಹಾಯ ದೊರೆಯದೆ, ಹೇಗೋ ಕಷ್ಟಪಟ್ಟು ಓದಿ ಮೇಲೆ ಬಂದವರು. ಇಂದಿನ ಬಡ ವಿದ್ಯಾರ್ಥಿಗಳಿಗೆ ತಾವು ಅನುಭವಿಸಿದ ಕಷ್ಟ ಬರಬಾರದೆಂಬ ಬಯಕೆ ಇವರದು.

ವರ್ಗ ಮೂರು:ಈ ಎರಡು ಅನುಭವವನ್ನು ಪಡೆಯದಿದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವುದು ಜನಾಂಗದ ಅಭಿವೃದ್ಧಿಯಲ್ಲಿನ ವಾಡಿಕೆ ಎಂದು ಭಾವಿಸಿ ತಮ್ಮಿಂದಾದ ನೆರವನ್ನು ನೀಡುತ್ತಿರುವರು. ಇನ್ನೊಂದು ವಿಷಯ ಗಮನಾರ್ಹ: ಶ್ರೀ ಸಭೆಯ ಹಿಂದಿನ ವಿದ್ಯಾಥಿವೇತನ ವಿತರಣೆಯ ದಾಖಲೆಗಳನ್ನು ತಡಕಾಡಿದಾಗ ಮನದಟ್ಟಾದ ಒಂದು ಸಂಗತಿ. ಹಿಂದೆ ವಿತರಿಸಲಾದ ವಿದ್ಯಾರ್ಥಿವೇತನಗಳಲ್ಲಿ ಹತ್ತರಲ್ಲಿ ಹತ್ತು ಅಥವಾ ಹತ್ತರಲ್ಲಿ ಒಂಬತ್ತು ಕುಡಾ ಬಾಲಕರಿಗೆ. ಬಾಲಕಿಯರು ವಿದ್ಯಾರ್ಥಿವೇತನ ಪಡೆದದ್ದು ತೀರಾ ವಿರಳ. ಇಂದಿನ ನಮ್ಮ ದಾಖಲೆಗಳನ್ನು ನೋಡಿದಾಗ ಎದ್ದುಕಾಣುವ ವಿಷಯ ಮೂರರಲ್ಲಿ ಎರಡು ಭಾಗಗಳಷ್ಟು ವಿದ್ಯಾರ್ಥಿವೇತನ ಬಾಲಕಿಯರ ಪಾಲಿಗೆ. ಇದು ಒಂದು ಆರೋಗ್ಯಕರ ಬೆಳವಣಿಗೆ ಎನ್ನೋಣವೇ? ಈ ಕಳೆದ ಮೂರು ವರ್ಷಗಳಲ್ಲಿ ಶ್ರೀ ಸುಬ್ರಹ್ಮಣ್ಯ ಸಭೆ ವಿತರಿಸಿದ ವಿದ್ಯಾರ್ಥಿವೇತನದ ಒಂದು ಸಂಕ್ಷಿಪ್ತ ವರದಿಯನ್ನು ಮಂಡಿಸಬಯಸುತ್ತೇನೆ. ಇದು ಸಮಾಜಬಾಂಧವರಿಗೆ ಒಂದು ಸ್ಪೂರ್ತಿಯಾಗಲಿ, ಆ ಮೂಲಕ ಇಂತಹ ಸತ್ಕಾರ್ಯದಲ್ಲಿ ಹೆಚ್ಚು ಹೆಚ್ಚು ಕೈಗಳು ಜತೆ ಸೇರಲಿ ಮತ್ತು ಅದರಿಂದ ನಮ್ಮ ಸಮಾಜ ಮತ್ತಷ್ಟು ಮೆಲಕ್ಕೆ ಏರಲಿ ಎಂಬ ಸದಾಶಯಗಳೊಂದಿಗೆ ಈ ವರದಿಯ ಮಂಡನೆ.

| ವರ್ಷ | ಸಾಲವಿದ್ಯಾರ್ಥಿವೇತನ Loan Scholarship | General Scholarship | | | | | Class1 & Donor to Child scheme |
|---|---|---|---|---|---|---|---|
| | Diploma,BE BDS,MBBS, BAMS, CA,MBA, MCA,M.ScMA, Mcom | Ph.D | BBM/BCA | Bsc/ BCom/ BA | LLB | PUC | |
| 2010-2011 | 73, students Rs.1415000/ | 1x10000 14x3500 26x3000 PGs 5x4000<br>10000/ 49000/ 78000/ 20000/<br>Medical student 1x5000/<br>**Grand total=1617500 for 150 students** | | | | | 31,student 40000 |
| 2011-2012 | 73, students Rs.1470000/ | 1x10000 11x3500 37x3000 PGs6<br>38500/ Rs,111000/ 6x4000<br>Rs.10000 Rs. 24000/<br>Medical 2x5000+ Rs. 10000<br>**Grand total : 1713100 for 14 students** | | | | | 33 student Rs.49600 |
| 2012-2013 | Total=87 students<br>BE56, MBBSI, MA 1 Diploma 7, Mc. 5, MCom 5, LLB 2, Bed 4BBM 1 MTes 2, MBA 1 BAMS 1, MD 2<br>Rs. 25000-30000 per candidate<br>Rs.2505000/ | 1<br>10000 | 10<br>3500<br>35000 | 39<br>3000<br>117000 | 1<br>3000<br>3000 | 47<br>1500<br>79000 | 48<br><br>79000 |
| | **ಸಬ್ಸಿಡಿ 600000** | | **Total students** | **233** | | **Total amount** | **Rs 3419500** |

ಈ ವಿದ್ಯಾಭ್ಯಾಸ ವರ್ಷದಲ್ಲಿ ಶ್ರೀ ಸುಬ್ರಹ್ಮಣ್ಯ ಸಭೆ ಸಮಾಜದ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ವಿನಿಯೋಗಿಸಿದ ಒಟ್ಟು ಮೊತ್ತ ರೂ.34,19,500 ಎಂದು ತಿಳಿಸಲು ಹೆಮ್ಮೆ ಎನಿಸುತ್ತಿದೆ. ಈ ಘನ ಕಾರ್ಯ ಸಾಕಾರಗೊಳ್ಳುವಂತೆ ಸಹಕರಿಸಿದ ಎಲ್ಲಾ ಸಮಾಜ ಬಾಂಧವರಿಗೂ ಶ್ರೀ ಸಭೆ ಆಭಾರಿಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕೆಲಸ ನಾವೆಲ್ಲ ಸೇರಿ ಮಾಡೋಣ ಎಂಬ ಹಂಬಲ ನಮ್ಮದು.

# ಬಳ್ಪ ಶ್ರೀ ದುರ್ಗಾಪರಮೆಶ್ವರಿ ದೇವಸ್ಥಾನಕ್ಕೆ ರೂ.3 ಲಕ್ಷ ಕೊಡುಗೆ

ದಿನಾಂಕ 25–04–2013 ರಂದು ಗುರುವಾರ ಪೂರ್ವಾಹ್ನ ಬಳ್ಪ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನಕ್ಕೆ ದಿ। ಕೋಲ್ಪೆ ವೆಂಕಟ್ರಮಣಯ್ಯ ಮತ್ತು ದಿ। ಶ್ರೀಮತಿ ಭಾಗೀರಥಿ ಅಮ್ಮನವರ ಸ್ಮರಣಾರ್ಥ ಅವರ ಮಕ್ಕಳು ರೂ.3 ಲಕ್ಷ ಹಾಗೂ ರೂ 7,190/– ಬೆಲೆ ಬಾಳುವ ಬೆಳ್ಳಿಯ ಆರತಿಯೊಂದನ್ನು ಕೊಡುಗೆಯಾಗಿ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಹಾಗೂ ಈ ದೇವಾಲಯದ ಖಜಾಂಚಿ ಶ್ರೀ ಕರುಣ್ ರಾವ್ ಬೆಳ್ಳೆ, ಕಡಬ ಗೋಪಾಲ್‌ಕೃಷ್ಣ ರಾವ್ ಮೊದಲಾದವರು ಉಪಸ್ಥಿತರಿದ್ದರು. ಕೋಲ್ಪೆ ಗೋಪಾಲಕೃಷ್ಣ ರಾವ್ ನೀಡಿದ ಈ ಹಣವನ್ನು ನಿರಖು ಠೇವಣಾತಿಯಾಗಿ ಬ್ಯಾಂಕ್‌ನಲ್ಲಿ ಇರಿಸುವುದಾಗಿ ತೀರ್ಮಾನಿಸಲಾಯಿತು.

**ವರದಿ : ಕುಂಭಾಟ್ ಗೋಪಾಲ ರಾವ್ ಕಡಬ.**

Buying and selling shares
as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425), NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಅನಂತಭಾವ ನಿಧಿಗೆ

ನಿತ್ಯರಥೋತ್ಸವ ನಿಮಗೆ
ನನ್ನೊಲವ ಕಾವ್ಯಗಳಿಗೆ।
ನಿತ್ಯನಿಲಾಂಜನ ನಿಮಗೆ
ನನ್ನೊಳಗಿನ ಭಾವ ಸಿರಿಗೆ।
ದಿನದಿನವೂ ಬಿರಿದೂ ಬಿರಿದೂ
ಅನುದಿನವೂ ಒಳಗೇ ಪುಟಿದು।
ಅನುಕೂಲ ಸಮಯ ಕಾದು
ಕೊನೆಗೊಮ್ಮೆ ರೂಪ ಪಡೆದು।
ಮಂಥರೆಯ ಅಂತರದಿ ಜನಿಸಿ
ಪಂಥ ಪರಿಧಿಯ ಸರಿಸಿ।
ಅಂತರಂಗದಿ ನಮನ ಸಲಿಸಿ
ಓಂತನನ ತನನ ನುಡಿಸಿ
ಮನದ ಕಣಕಣದಿ ಉದಿಸಿ
ತನುವ ಅಣು ಅಣುವೂ ಸ್ಫುರಿಸಿ
ದನಿಗೆ ದನಿಯಾಗಿ ಗುನುಗಿದ
ಅಂತರಂಗದ ಅನಂತಗೀತೆಗೆ
ಅನುಗಾಲ ನೀಲಾಂಜನ
ಅನಂತ ಭಾವ ನಿಧಿಗೆ॥

★★★★

## ಬೋಳು ಮರ

ಬೇಡ ಬೇಡವೆಂದರೂ ಕೂಡಾ
ನಾ ಬೋಳು ಮರವಾದೆ ನೋಡ।
ನಾನಂದು ಬೀಜವೊಡೆದು
ನಗುನಗುತ ಚಿಗುರೊಡೆದು
ಹಚ್ಚ ಹಸುರುಡುಗೆ ಹೊದೆದು
ಹೆಮ್ಮರವಾಗಿ ಬೆಳೆದಿಹುದು
ಎನ್ನ ತೋಳಲಿ ಜೀಕಿದವರೆಷ್ಟೋ!
ಬೆನ್ನೇರಿ ನೆಗೆದಾಡಿ ನಲಿದವರೆಷ್ಟೋ!
ಸೊಪ್ಪು ಸವರಿದವರ ಕೊಟ್ಟಿಗೆಗೆ
ಕಟಕಟನೆ ಕಡಿದರೋ ಕಟ್ಟಿಗೆಗೆ
ಹದಿಹರೆಯದುತ್ಸಾಹದ ಬದಲಿಗೆ
ಮುದಿತನ ಮುತ್ತಿದೆ ನನ್ನ ಪಾಲಿಗೆ
ಮರುಕವಿಲ್ಲದೆ ಮುರಿದರೆನ್ನ ರೆಂಬೆಗಳ
ಕರುಣೆಯಿಲ್ಲದೆ ಕಡೆದರೆನ್ನ ಕೊಂಬೆಗಳ
ಹೂವರಳಲಿಲ್ಲ ಓ ಪಯಣಿಗ ಕೇಳ
ಫಲಬಿಡುವ ಫಲವಿಲ್ಲದೆ ನಾ ಅತ್ತೆ ಗಳಗಳ
ಪವನಜನ ಸುತರಿನ್ನು ಸುಳಿಯರೆನ್ನ ಬಳಿ
ಹಕ್ಕಿಗಳೆನ್ನೊಡಲಿನಲಿ ಗೂಡಿಡಲಾರವು
ಪರಪುಟ್ಟ ಪೋರರು ನಲಿಯರೆನ್ನ ತೋಳಲಿ
ಉಕ್ಕುವಾನಂದದಲಿ ಕೋಗಿಲೆಗಳುಲಿಯವು
ಬೋಳುಮರ ಗಾಳಿಗೂಬರ ಎಂದೆನ್ನನಿರಿವರು
ಸ್ವಾರ್ಥಕ್ಕೆ ಎನ್ನ ಬೋಳಾಗಿಸಿದ ಹಮ್ಮೀರರು
ಬೇಡ ಬೇಡವೆಂದರೂ ಕೂಡಾ
ನಾ ಬೋಳು ಮರವಾದೆ ನೋಡ।

★★★★

## ಚಾಲಕನಿಗೆ ಮೊರೆ

ಚಾಲಕ ನಾ ನಿನ್ನ ನಂಬಿದೆ
ನೀ ಚಾಲಕನಿಂದ ನಡೆಸೆನ್ನುವೆ॥
ರಸ್ತೆಯೋ ಹೊಂಡಗಳ ಆಗರ।
ಇಲ್ಲಿ ಗಿಜಿಗಿಡುವ ಜನಸಾಗರ॥
ರಕ್ಷಿಸೋ ಹೊಂಡಕೆ ಹಾಕದೆ ।ನೀ।
ತಪ್ಪಿಸೋ ಅಪಘಾತ ಸಾವಿರ॥
ಅತ್ತಿತ್ತ ನೋಡದಿರು ಚಾಲಕಾ ।ಅಲ್ಲಿ।
ಅಶ್ಲೀಲ ಚಿತ್ರಗಳೂ ಚಾಲಕಾ॥
ಚಿತ್ತಾವ ಕೆಡಿಸ್ಯಾವು ಚಾಲಕಾ ।ನಿನ್ನಾ।
ದಿಟ್ಟೀಯ ನೇರವಿಡು ಚಾಲಕಾ॥
ಉಬ್ಬು ತಗ್ಗುಗಳಿವೆ ಚಾಲಕಾ ।ನೀ।
ತಬ್ಬಿಬ್ಬಾಗದಿರು ಚಾಲಕಾ।
ಒಬ್ಬಳೆ ಮಡದಿಯ ಮನೆಯಲಿ ।ಬಿಟ್ಟು
ಒಬ್ಬನೇ ಬಂದಿರುವೆ ಚಾಲಕಾ॥
ಸ್ಪರ್ಧೆಯ ಕಣವಿದು ಚಾಲಕಾ ।ಇಲ್ಲಿ।
ಸ್ಪರ್ಧೆಯು ಸಾವಿರ ಚಾಲಕಾ॥
ಸ್ಪರ್ಧೆಗೆ ಇಳಿಯದಿರು ಚಾಲಕಾ ।ಇದು।
ಸರಕಾರಿ ಬಸ್ಸಲ್ಲ ಚಾಲಕಾ॥
ವಕ್ರವಾಗಿದೆ ರಸ್ತೆ ಚಾಲಕಾ ನೀ ಚಕ್ರಾವ
ತಿರುಗಿಸೋ ಜಾಗ್ರತೇ
ಚಕ್ರಧರಾ ನಮ್ಮ ಚಕ್ರೇಶ ಚಾಲಕಾ
ವಕ್ರ ಬುದ್ಧೀಲಿ ನಿನ್ನ ವಂದಿಪೆ॥

**ಶ್ರೀಮತಿ ಸಾವಿತ್ರಿ ಮನೋಹರ್**
ನಿವೃತ್ತ ಮುಖ್ಯೋಪಾಧ್ಯಾಯರು ಕಾರ್ಕಳ

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ಇದರ ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ, ವಿಟ್ಲ, ದ.ಕ. ಇದರ 2011-12ನೇ ಸಾಲಿನ ಮಹಾಸಭೆಯು ದಿನಾಂಕ 24-03-2013ನೇ ಭಾನುವಾರ ಸಂಜೆ ಗಂಟೆ 3ಕ್ಕೆ ಸರಿಯಾಗಿ ಸಭಾದ ಸದಸ್ಯರಾದ ಕೆಪಿಟಿಸಿಎಲ್‌ನ ಮಂಗಳೂರು ಕೇಂದ್ರ ಕಛೇರಿಯಲ್ಲಿ ಕಾರ್ಯ ನಿರ್ವಾಹಕ ಇಂಜಿನಿಯರ್ ಹುದ್ದೆ ನಿರ್ವಹಿಸುತ್ತಿರುವ ಶ್ರೀ ವಿ. ಹರೀಶ್ ರಾವ್ ಇವರ ನೂತನ ಗೃಹ ''ವಸಂತಿ ನಿಲಯ''ದಲ್ಲಿ ಜರಗಿತು.

ಸಭೆಯಲ್ಲಿ ಅನೇಕ ಮಂದಿ ಸ್ಥಾನಿಕ ಬಾಂಧವರು ಭಾಗವಹಿಸಿದ್ದರು. ಮಹಾಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀಯುತ ವಿದ್ಯಾವತಿ ರಾವ್, ನಿವೃತ್ತ ಅಂಚೆ ಅಧೀಕ್ಷಕರು ಅಲ್ಲಿಪಾದೆ ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಕಾರ್ಯದರ್ಶಿಯಾದ ಶ್ರೀ ಎನ್.ಹರೀಶ್ ರಾವ್ ನೆಡ್ಯಾಳ (ಮಾಲಕರು, ನೇಹಾ ಸ್ಟುಡಿಯೋ, ವಿಟ್ಲ) ಮತ್ತು ಖಜಾಂಚಿಯಾದ ಶ್ರೀ ಡಿ.ಪದ್ಮನಾಭ ರಾವ್, ನಿವೃತ್ತ ಶಿಕ್ಷಕ, ವಿಟ್ಲ ಇವರು ಉಪಸ್ಥಿತರಿದ್ದರು. ಕುಮಾರಿಯರಾದ ಶರಣ್ಯ, ಮಧುರಾ ಮತ್ತು ರಚನಾ ಇವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭವಾಯಿತು. ನೆರೆದ ಸ್ಥಾನಿಕ ಬಾಂಧವರನ್ನು ಅಧ್ಯಕ್ಷರು ಸ್ವಾಗತಿಸಿ, ನಂತರ ದೀಪವನ್ನು ಬೆಳಗಿಸಿ ಸಭೆಗೆ ಚಾಲನೆ ನೀಡಿದರು. ನಂತರ ಕಾರ್ಯದರ್ಶಿಯವರು ಹಿಂದಿನ ಸಾಲಿನ ವರದಿಯನ್ನು ಓದಿದರು. ನಂತರ ಖಜಾಂಚಿಯವರು ಹಿಂದಿನ ವರ್ಷದ ಲೆಕ್ಕಪತ್ರಗಳನ್ನು ಮಂಡಿಸಿದರು. ಸಭೆಯು ವರದಿ ಮತ್ತು ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ನಂತರ ಕುಮಾರಿಯರಾದ ರಾಜಶ್ರೀ ರಾವ್ ಅಲ್ಲಿಪಾದೆ, ಮಧುರಾ ವಿಟ್ಲ ಮತ್ತು ಶರಣ್ಯ ವಿಟ್ಲ ಇವರಿಗೆ ವಿದ್ಯಾರ್ಥಿ ವೇತನವನ್ನು ಸಂಘದ ಅಧ್ಯಕ್ಷರು ವಿತರಿಸಿದರು. ಮುಂದಿನ ಮೂರು ವರ್ಷಗಳ ಅವಧಿಗೆ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಶ್ರೀ ವಿದ್ಯಾವತಿ ರಾವ್ ಅಲ್ಲಿಪಾದೆ, ಉಪಾಧ್ಯಕ್ಷರಾಗಿ ಶ್ರೀ ಡಿ. ನಾರಾಯಣ ರಾವ್ ಕಿರಿಂಚಿ ಮೂಲೆ, ಕಾರ್ಯದರ್ಶಿಯಾಗಿ ಶ್ರೀ ಹರೀಶ್ ರಾವ್ ನೇಡ್ಯಾಳ, ಜೊತೆ ಕಾರ್ಯದರ್ಶಿಯಾಗಿ ಶ್ರೀ ವಿಷ್ಣು ಶರ್ಮ ಕೇಪು, ಖಜಾಂಚಿಯಾಗಿ ಶ್ರೀ ಡಿ. ಪದ್ಮನಾಭ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀ ವಿ.ಮನೋಹರ್ ರಾವ್, ರಾಮಕೃಷ್ಣ ಕಾಟುಕುಕ್ಕೆ, ಯಶೋಧ ಜಿ. ರಾವ್ ವಿಟ್ಲ, ರಮೇಶ್ ರಾವ್ ಕಾವಳಕಟ್ಟೆ ಇವರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು. ಅಲ್ಲದೆ ಶ್ರೀ ಭವಾನಿಶಂಕರ ರಾವ್ ಕೇದಿಗೆ, ರವೀಂದ್ರ ರಾವ್ ವಿಟ್ಲ, ಕೃಷ್ಣ ಶರ್ಮ ಅನಾರ್, ಪ್ರಕಾಶ್ ಟಿ., ವರದರಾಜ ರಾವ್ ಡಿ.ಎಸ್. ಕಾರಾಜೆ ಮೊದಲಾದವರನ್ನು ಸಲಹಾ ಮಂಡಳಿಗೆ ಆರಿಸಲಾಯಿತು.

ಶ್ರೀ ಮುರಳೀಧರ ರಾವ್ ವಿಟ್ಲ ಸಮಸ್ತ ಬ್ರಾಹ್ಮಣ ಒಕ್ಕೂಟದ ಬಗ್ಗೆ ಪ್ರಸ್ತಾವಿಸಿದರು. ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಕಾರ್ಯಕ್ರಮಗಳಲ್ಲಿ ಕಛೇರಿ ಪ್ರಬಂಧಕರಾಗಿ ಸೇವೆ ಸಲ್ಲಿಸಿದ ಶ್ರೀ ಅನಂತ ಪ್ರಸಾದ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ವಿದ್ಯಾಪತಿ ರಾಯರ ಅಧ್ಯಕ್ಷೀಯ ಭಾಷಣದ ನಂತರ ಕಾರ್ಯದರ್ಶಿಗಳು ಧನ್ಯವಾದವನ್ನು ಸಮರ್ಪಿಸಿದರು. ಎಲ್ಲಾ ಕಾರ್ಯಕ್ರಮಗಳು ನಮ್ಮ ತುಳು ಭಾಷೆಯಲ್ಲಿ ನಡೆದದ್ದು ಅಂದಿನ ವಿಶೇಷತೆಯಾಗಿತ್ತು.

## ಸ್ಥಾನಿಕ ಸಮಾಜದ ಅಪ್ರತಿಮ ಸಾಧಕಿ
## ಪೂಜ್ಯ ಮಾತೃಶ್ರೀಯವರಿಗೆ ನೆನಪಿನ ಕಾಣಿಕೆ

ಜನನ:
1929



ನಿಧನ:
17-10-2012

**ಕರ್ವಾಲು ಶ್ರೀಮತಿ ವನಜಾಕ್ಷಿ ಅಮ್ಮ**
(ದಿ. ಕರ್ವಾಲು ಕೃಷ್ಣರಾಯರ ಪತ್ನಿ)

ಕಡುಬಡತನದ ಬೇಗೆಯಲ್ಲಿ ಗಂಧದ ಕೊರಡಿನಂತೆ ತಮ್ಮ ದೇಹವನ್ನು ತೇದು ಮಕ್ಕಳು, ಮೊಮ್ಮಕ್ಕಳನ್ನು ಸಾಕಿ ಸಲಹಿ ಹೊಂಬೆಳಕಿನ ತುತ್ತತುದಿಗೆ ಏರಿಸಿದ ಮಾತೆಗೆ ಕೊಡುವ ಕಾಣಿಕೆ ಈ ಕೆಳಗಿನ 4 ಸೊಲ್ಲುಗಳು ಮಾತ್ರಾ !

ನೀನೆಲ್ಲಿ ನಡೆವೆ ದೂರಾ! ಎಲ್ಲೆಲ್ಲು ಲೋಕವೇ !!
ಈ ಲೋಕವೆಲ್ಲ ಘೋರಾ! ಎಲ್ಲೆಲ್ಲು ಶೋಕವೇ !!
ನಗುವಾಗ ಎಲ್ಲ ನೆಂಟರು! ಅಳುವಾಗ ಯಾರೂ ಇಲ್ಲ !!
ಮುಳ್ಳಲ್ಲಿ ನಿನ್ನ ನಡೆಸಿ! ನಲಿವಾ ನಗುವೇ ವಿಕಾರ !!
ನೆರಳನ್ನು ನೀಡುವಂತಹ! ಮರವನ್ನೇ ಕಡಿವರೆಲ್ಲಾ !!
ನಿಸ್ವಾರ್ಥ ಜೀವಿಗಳಿಗೇ! ಜಗದೇ ಕಹಿಯೇ ಅಪಾರ !!
ಅಪಕಾರವನ್ನೇ ಕಾಣುವೇ! ಉಪಕಾರವನ್ನು ಕಾಣೆ !!
ಅನುರಾಗವಿಲ್ಲಿ ಇಲ್ಲವೇ! ಮನದೇ ಇದುವೇ ವಿಚಾರ !!

ಶಂಕರನಾರಾಯಣ ರಾವ್ ಕರ್ವಾಲ್ (ಪುತ್ರ)
DGM, VT CORP PVT LIMITED, BANGALORE
ಸಂಧ್ಯಾ ಎಸ್. ರಾವ್ (ಸೊಸೆ)
ಸುದರ್ಶನ್ ರಾವ್ ಕರ್ವಾಲ್ (ಮೊಮ್ಮಗ)
(FIRST OFFICER, JET AIRWAYS)
ಸಂಗೀತಾ ರಾವ್ ಕರ್ವಾಲ್ (ಮೊಮ್ಮಗಳು)
(MYNTRA.COM, H.R.DEPT.)

Add.
Flat No. D-301, D-block, Eta Garden Apartments
Magadi Road, Near Binny Mills,
Bangalore - 560023
Mob: 9449958151, 9342828168
E-mail: shankaranarayanarao@gmail.com

# ಶ್ರೀ ರಾಮ ಧಾಮ ಧ್ಯಾನ ಮಂದಿರದಲ್ಲಿ 3ದಿನಗಳ ಧಾರ್ಮಿಕ ವಿಧಿ

ಕಾರ್ಕಳ ಜೋಗುಳಬೆಟ್ಟು ಶ್ರೀ ರಾಮ ಧಾಮ ಧ್ಯಾನ ಮಂದಿರದಲ್ಲಿ ದಿನಾಂಕ 18-04-2013ರಂದು ವಾರ್ಷಿಕೋತ್ಸವ ಪ್ರಯುಕ್ತ ವಿವಿಧ ಧಾರ್ಮಿಕ ವಿಧಿಗಳು ಅನ್ನ ಸಂತರ್ಪಣೆಯೊದಿಗೆ ನೆರವೇರಿತು . 19-04-2013ರಂದು ಶ್ರೀ ರಾಮ ನವಮಿ ಪ್ರಯುಕ್ತ ಶ್ರೀ ರುದ್ರಾಭಿಷೇಕವೂ ದಿನಾಂಕ 20-04-2013ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಹಾಗೂ ಇತರ ವೈದಿಕರ ನೆರವಿನೊಂದಿಗೆ ಸರ್ಪಸೂಕ್ತ ಹೋಮ ನೆರವೇರಿತು. ಶ್ರೀ ಭಾಸ್ಕರ ರಾವ್ ಕೋಲ್ಪೆ ದಂಪತಿಗಳು ಕಂಕಣಬದ್ಧರಾಗಿ ಭಾಗಿಗಳಾಗಿದ್ದರು. ಕುಟುಂಬದ ಹಿರಿಯರಾದ ಕೋಲ್ಪೆ ಗೋಪಾಲಕೃಷ್ಣ ರಾವ್, ಶ್ರೀ ಶಶಿಧರ ರಾವ್ ಕೋಲ್ಪೆ , ಚಂದ್ರಶೇಖರ ರಾವ್ ಕೋಲ್ಪೆ ಮೊದಲಾದವರು ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾದರು,



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ಕಟಪಾಡಿ ಉಮೇಶ್‌ರಾಯರಿಗೆ ಸನ್ಮಾನ

ಮಹಾರಾಷ್ಟ್ರ ಸರಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಕಟಪಾಡಿ ಉಮೇಶ್‌ರಾಯರನ್ನು ಮಹಾರಾಷ್ಟ್ರ ಸರಕಾರದ ಕಾಮಗಾರಿ ಇಲಾಖೆಯ ಕ್ಯಾಬಿನೆಟ್ ಸಚಿವರಾದ ಶ್ರೀ ಛಗನ್‌ರಾವ್ ಭುಜಬಲ್ ಅವರು ಹೂ-ಹಾರ-ಹಣ್ಣು- ಹಂಪಲು,ಶಾಲು,ಸ್ಮರಣಿಕೆ ನೀಡಿ ಅಭಿನಂದಿಸಿದ್ದಾರೆ.

ಕಳೆದ 32 ವರ್ಷಗಳಲ್ಲಿ ಇಲಾಖೆಯ ವಿವಿಧ ಹುದ್ದೆಗಳಲ್ಲಿ ರಾಜ್ಯದ ಬೇರೆಬೇರೆ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಕೆ.ಉಮೇಶ್‌ರಾಯರು ಮಹಾರಾಷ್ಟ್ರದ ತೆರೆಕೋಲು ನದಿಗೆ ಅಡ್ಡಲಾಗಿ ಆರುಂದಾ-ಕಿರಣ್‌ಪಾನಿ ಊರುಗಳನ್ನು ಸೇರಿಸುವ (ಮಹಾರಾಷ್ಟ್ರ-ಗೋವಾ ಗಡಿ ಪ್ರದೇಶ) ಮೇಲ್‌ಸೇತುವೆಯನ್ನು ತಮ್ಮ ಅನುಭವೀ ಅವಿರತ ದುಡಿಮೆಯಿಂದ ವಿಶಿಷ್ಟ ರೀತಿಯ ಕಾಮಗಾರಿಯ ಮೂಲಕ ಅತ್ಯಂತ ಶೀಘ್ರವಾಗಿ ನಿರ್ಮಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ದಿನಾಂಕ 16-03-2013ರಂದು ಸೇತುವೆ ಉದ್ಘಾಟನೆಯ ಸರಕಾರಿ ಸಮಾರಂಭದಲ್ಲಿ ನೆರೆದ ಗಣ್ಯ ಅತಿಥಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶ್ರೀ ಉಮೇಶ್‌ರಾಯರ ಈ ಸಾಧನೆಯ ಬಗ್ಗೆ ಮುಕ್ತಕಂಠದ ಪ್ರಶಂಸೆ ಹಾಗೂ ಸನ್ಮಾನವು ನೆರವೇರಿತು . ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾದ ಶ್ರೀ ಕೆ. ಉಮೇಶ್ ರಾಯರ ಈ ಸಾಧನೆಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

## ಪದೋನ್ನತಿ

ಕರ್ನಾಟಕ ಬ್ಯಾಂಕಿನ ಬೆಂಗಳೂರಿನ ಬನಶಂಕರಿ ಶಾಖೆಯಲ್ಲಿ ಗುಮಾಸ್ತೆಯಾಗಿದ್ದ ಶ್ರೀಮತಿ ಅಮಿತಾ ನವೀನ್ ಕುಮಾರ್ ಇವರು ಅಸಿಸ್ಟೆಂಟ್ ಮೇನೇಜರ್ ಆಗಿ ಭಡ್ತಿ ಪಡೆದು ಮಂಗಳೂರಿನ ಮುಖ್ಯ ಕಛೇರಿಗೆ ವರ್ಗಾವಣೆಯಾಗಿ ತಮ್ಮ ಅಧಿಕಾರವನ್ನು ಸ್ವೀಕರಿಸಿರುತ್ತಾರೆ.

## ಗೃಹಪ್ರವೇಶ

ಶ್ರೀಮತಿ ಮತ್ತು ಶ್ರೀ ಡಾ। ಸತ್ಯನಾರಾಯಣ ರವರು ಶೃಂಗೇರಿಯ ಅಡ್ಡಗದ್ದೆ ಅಗ್ರಹಾರದಲ್ಲಿ ನಿರ್ಮಿಸಿದ ನೂತನ ಗೃಹ "ರೇಕಿ ಕುಟೀರ"ದ ಪ್ರವೇಶೋತ್ಸವವನ್ನು ತಾ.13-5-2013ರಂದು ನೆರವೇರಿಸಿದರು.

## ವಿಳಾಸ ಬದಲಾವಣೆ

**P. Subrahmanya Rao**
No.650, Arya Arcade,
S.F.1, 9th Main,
4th Cross, BSK 1st Stage,
Srinivasanagara,
Bangalore-560050.

****

**AnanthaKrisna Rao**
No.431, CQAL Layout,
Sahakara Nagara,
Bangalore-560092.

****

**Shankarnarayana Rao K.**
Flat No.D301, D Block,
ETA Gardan Apartments,
Near Vinny Mills,
Magadi Road,
Bangalore-560023.

### ಮೇಷ ಮಾಸದ ವಿಶೇಷ ದಿನಗಳು

| | |
|---|---|
| 14-05-2013 | ವೃಷಭ ಸಂಕ್ರಮಣ |
| 15-05-2013 | ಶ್ರೀ ಶಂಕರ ಜಯಂತಿ |
| 21-05-2013 | ಸರ್ವೇಕಾದಶೀ |
| 22-05-2013 | ಪ್ರದೋಷ: |
| 23-05-2013 | ಶ್ರೀ ನೃಸಿಂಹ ಜಯಂತಿ |
| 25-05-2013 | ಪೂರ್ಣಿಮಾ, ರೋಹಿಣೀ ನಕ್ಷತ್ರಾರಂಭ |
| 28-05-2013 | ಸಂಕಷ್ಟ ಚತುರ್ಥಿ (ಚಂದ್ರೋದಯ ರಾತ್ರಿ ಘಂಟೆ 10.21ಕ್ಕೆ) |
| 04-06-2013 | ಸರ್ವೇಕಾದಶೀ |
| 06-06-2013 | ಪ್ರದೋಷ: |
| 08-06-2013 | ಅಮವಾಸ್ಯಾ, ಮೃಗಶಿರಾ ನಕ್ಷತ್ರಾರಂಭ |
| 15-06-2013 | ಮಿಥುನಾ ಸಂಕ್ರಮಣ |

## ನಾಮಕರಣ

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಕೆ.ನಿತಿನ್ ಕುಮಾರ್ ಮತ್ತು ಶ್ರೀಮತಿ ಅಕ್ಷತಾ ನಿತಿನ್ ಇವರ ಸುಪುತ್ರಿ 'ನಿಹಿರಾ' ಇವಳ ನಾಮಕರಣವನ್ನು ಸ್ವಗೃಹದಲ್ಲಿ ತಾ.01-05-2013ರಂದು ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ನೆರವೇರಿಸಿದರು.

## ನಿಧನ

### ಜಾನಕಿ ರಾಮ ರಾವ್

ದಿ। ಉದ್ಯಾವರ ರಾಮರಾಯರ ಪತ್ನಿ ಶ್ರೀಮತಿ ಜಾನಕಿ ರಾಮ ರಾವ್ (82) ಇವರು ಬೆಂಗಳೂರಿನ ಮಗಳ ಮನೆಯಲ್ಲಿ ದಿನಾಂಕ 30-04-2013ರಂದು ನಿಧನರಾದರು. ಮೃತರು ಇಬ್ಬರು ಪುತ್ರಿಯರು ರಾಜಶ್ರೀ ಸತೀಶ ಹಾಗೂ ರಂಜನಿ ಚಂದ್ರಶೇಖರ್ ಇವರನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರು ನಮ್ಮ ಸಂಘದ ಖಜಾಂಜಿ ಬಿ. ಕೃಷ್ಣಮೂರ್ತಿರಾಯರ ಹಿರಿಯ ಸಹೋದರಿ.

*** ***

### ಪಳ್ಳಿಗುಡ್ಡೆ ಕೃಷ್ಣಮೂರ್ತಿ ರಾವ್

ಬಾರ್ಕೂರು ಪಳ್ಳಿಗುಡ್ಡೆ ಕೃಷ್ಣಮೂರ್ತಿ ರಾವ್ (70 ವರ್ಷ) ತಾ.01-04-2013ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

*** ***

### ಡಾ। ಬಿ.ರಾಮಚಂದ್ರ ರಾವ್

ದಿ। ಬಪ್ಪನಾಡು ಗೋವಿಂದರಾಯರ ಪುತ್ರ ಡಾ। ಬಪ್ಪನಾಡು ರಾಮಚಂದ್ರರಾಯರು (59 ವರ್ಷ) ತಾ.16-04-2013ರಂದು ಅಮೆರಿಕಾದ ಚಿಕಾಗೋದಲ್ಲಿ ನಿಧನರಾದರು. ಅವರು ಪತ್ನಿ ಇಬ್ಬರು ಪುತ್ರಿಯರನ್ನು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

## ನಿಹಾಲ್ ಆರ್.ರಾವ್.



ಉಡುಪಿ ಪೂರ್ಣಪ್ರಜ್ಞಾ ಪಿ.ಯು. ಕಾಲೇಜಿನ ವಿದ್ಯಾರ್ಥಿ ನಿಹಾಲ್ ಆರ್.ರಾವ್.2012-13ನೇ ಸಾಲಿನ ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ 92%(550)ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಕರ್ನಾಟಕ ಬ್ಯಾಂಕ್‌ನ ಅಂಬಾಗಿಲು ಶಾಖೆಯಲ್ಲಿ ಅಧಿಕಾರಿಯಾಗಿರುವ ಚಿಟ್ಪಾಡಿ ರಾಜೇಶ್ ರಾವ್ ಹಾಗೂ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾದ ಶ್ರೀಮತಿ ಮೀರಾ ಆರ್ ರಾವ್ ದಂಪತಿಗಳ ಪುತ್ರನಾದ ನಿಹಾಲ್‌ನ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಕೆ. ಕ್ಷಮಾ ರಾವ್



ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಾರ್ಕಳ ಜೇಸೀಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಕೆ. ಕ್ಷಮಾ ರಾವ್. 625 ರಲ್ಲಿ 616 (ಶೇ. 98.56) ಅಂಕ ಪಡೆದಿರುತ್ತಾಳೆ. ಈಕೆ ಕಾರ್ಕಳ ತಾಲೂಕಿನಲ್ಲಿ ದ್ವಿತೀಯ ಸ್ಥಾನಿಯಾಗಿ, ರಾಜ್ಯದಲ್ಲಿ 7ನೇ ಸ್ಥಾನ ಪಡೆದಿರುತ್ತಾಳೆ.

ಪಠ್ಯ ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಆಸಕ್ತಿ ಹೊಂದಿರುವ ಇವಳು ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ತಾಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿರುತ್ತಾಳೆ. ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿರುತ್ತಾಳೆ. ತನ್ನ ಶಿಕ್ಷಣ ಸಂಸ್ಥೆಯಲ್ಲಿ 2012-2013ನೇ ಸಾಲಿನ ವರ್ಷದ 'ಅತ್ಯುತ್ತಮ ವಿದ್ಯಾರ್ಥಿನಿ' ಪ್ರಶಸ್ತಿಯನ್ನು ಪಡೆದಿರುತ್ತಾಳೆ. ಮಂಗಳೂರಿನ ಸನಾತನ ನಾಟ್ಯಾಲಯದ ನೃತ್ಯ ವಿದುಷಿ ಶ್ರೀಮತಿ ಶಾರದಾಮಣಿ ಶೇಖರ್ ಅವರ ಶಿಷ್ಯೆಯಾಗಿರುವ ಈಕೆ, ಕಳೆದ ಆಕ್ಟೋಬರ್‌ನಲ್ಲಿ ನಡೆದ ಭರತನಾಟ್ಯ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದು ಪ್ರಸ್ತುತ ವಿದ್ವತ್ ಕಲಿಕೆ ಮುಂದುವರಿಸುತ್ತಿದ್ದಾಳೆ ಹಾಗೂ ರಾಜ್ಯದಾದ್ಯಂತ ಹಲವೆಡೆ 'ರಾಷ್ಟ್ರದೇವೋಭವ' ನೃತ್ಯ ರೂಪಕ ತಂಡದಲ್ಲಿ ಗುರುತಿಸಿಕೊಂಡು ನೃತ್ಯ ಪ್ರದರ್ಶನಗಳನ್ನು ನೀಡಿದ್ದಾಳೆ. ಇವಳು ಕಾರ್ಕಳದ ಜೋಗಲುಬೆಟ್ಟು ಕೆ. ಅರವಿಂದ ರಾವ್ ಮತ್ತು ಸಂಧ್ಯಾ ರಾವ್ ದಂಪತಿ ಪುತ್ರಿ. ಇವಳ ಸಾಧನೆಗೆ ಶಾರದಾ ಬಳಗದ ಅಭಿನಂದನೆಗಳು.

## ಶ್ರೀ ನವನೀತ ಕುಮಾರ್ ವಿ.ಎ



ಶ್ರೀ ನವನೀತ ಕುಮಾರ್ ವಿ.ಎ ಇವರು ಪಿಯುಸಿ ಶಿಕ್ಷಣ ಮುಗಿಸಿ ಮಂಗಳೂರಿನ "Evening College" (Besent)ನಲ್ಲಿ "B.Com" ಶಿಕ್ಷಣವನ್ನು ಪೂರೈಸಿ 2012ರಲ್ಲಿ ನಡೆದ C.A.ಪರೀಕ್ಷೆಯಲ್ಲಿ ಉತ್ತೀರ್ಣರಾಗಿ "Reliance Vision Express" ನಲ್ಲಿ "Audit Specialist" ಆಗಿ ನೇಮಕಗೊಂಡಿರುತ್ತಾರೆ. ಇವರು ಶ್ರೀಮತಿ ಅನುಸೂಯ ಮತ್ತು ವಿಷ್ಣು ರಾವ್ ಮಡಿಯಾಲ ಇವರ ಪುತ್ರ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಡಾ.ವೈ. ರವೀಂದ್ರನಾಥ ರಾವ್ ಅವರ ಯುಜಿಸಿ ಪ್ರಾಯೋಜಿತ ಸಂಶೋಧನೆ



ಸ್ಥಳೀಯ ಎಸ್.ಎಂ.ಎಸ್. ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ವೈ. ರವೀಂದ್ರನಾಥ ರಾವ್ ಅವರು ಯುಜಿಸಿ ಪ್ರಾಯೋಜಿತ " ಹೆಲ್ತ್ ಸ್ಟ್ಯಾಟಸ್ ಆಫ್ ಟ್ರೈಬಲ್ ವಿಮೆನ್: ಎ ಮೆಡಿಕಲ್ ಸೋಶಿಯೋಲಜಿಕಲ್ ಸ್ಟಡಿ ಇನ್ ಉಡುಪಿ ಡಿಸ್ಟ್ರಿಕ್ಟ್" ಎಂಬ ವಿಷಯದ ಕುರಿತು ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಿ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಸಂಶೋಧನಾ ವರದಿ ಸಲ್ಲಿಸಿದ್ದಾರೆ. ಅನೇಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ವಿವಿಧ ಸಂಶೋಧನಾ ಪ್ರಾಜೆಕ್ಟ್‌ಗಳಿಗೆ ಮಾರ್ಗದರ್ಶನ ನೀಡುತ್ತಿರುವ ಡಾ.ರಾವ್ ಈ ಹಿಂದೆ ದ.ಆಫ್ರಿಕಾ ಮತ್ತು ಸ್ವೀಡನ್ ದೇಶಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ವಿವಿಧ ಕೃತಿಗಳಲ್ಲದೆ, ಇವರ ಅನೇಕ ಸಂಶೋಧನಾ ಪ್ರಬಂಧಗಳು ಸಂಪಾದಿತ ಕೃತಿಗಳಲ್ಲಿ ಮತ್ತು ವೃತ್ತಿಪರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

## ಬಯೋ ಸಾಯನ್ಸ್ ಇಂಡಸ್ಟ್ರಿ ವಿಭಾಗದಲ್ಲಿ ಡಾ। ರಾಜಶ್ರೀ ದೇವರಕೊಂಡ



ಬಯೋ ಸಾಯನ್ಸ್ ಇಂಡಸ್ಟ್ರಿ ವಿಭಾಗದಲ್ಲಿ ಭಾರತದ ಮೊದಲ 50 ಮಹಿಳೆಯರ ಸಾಲಿನಲ್ಲಿ ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಡಾ। ರಾಜಶ್ರೀ ದೇವರಕೊಂಡ ಆಯ್ಕೆಯಾಗಿದ್ದಾರೆ. ವೃತ್ತಿಯಲ್ಲಿ ವೈದ್ಯೆಯಾಗಿರುವ ಡಾ। ರಾಜಶ್ರೀಯವರು ಕ್ಲಿನಿಕಲ್ ರಿಸರ್ಚ್‌ನಲ್ಲಿ ವಿಶೇಷ ಅನುಭವ ಪಡೆದಿದ್ದು,ಅಮೇರಿಕಾ,ಕೆನಡಾ ಮೊದಲಾದ ದೇಶಗಳಲ್ಲಿ ವೃತ್ತಿಯಲ್ಲಿದ್ದು, ಸದ್ಯ ಬೆಂಗಳೂರಿನಲ್ಲಿ ವಿದೇಶಿ ಮೂಲದ ಕಂಪನಿಯಲ್ಲಿ ವೈದ್ಯೆಯಾಗಿ ದುಡಿಯುತ್ತಿದ್ದಾರೆ.

ಡಾ। ರಾಜಶ್ರೀ ದೇವರಕೊಂಡರವರು ಬೆಂಗಳೂರಿನ ಖ್ಯಾತ ಇಂಜಿನಿಯರ್ ಶ್ರೀ ಮಹೇಶ್ ದೇವರಕೊಂಡರವರ ಪತ್ನಿಯಾಗಿದ್ದು, ಮಾರ್ಪಳ್ಳಿ ಕುಟುಂಬದ ಶ್ರೀ ಗೋಪಾಲಕೃಷ್ಣರಾವ್ ಹಾಗೂ ಶ್ರೀಮತಿ ಜಯಲಕ್ಷ್ಮಿ ದಂಪತಿಗಳ ಪುತ್ರಿ,ಹಾಗೂ ಬೆಂಗಳೂರಿನಲ್ಲಿ ಖ್ಯಾತ ನೇತ್ರ ತಜ್ಞರಾಗಿರುವ ಡಾ। ರಾಮಮೂರ್ತಿರಾವ್ ಎಮ್.ಜಿ.ಯವರ ಸಹೋದರಿ. ಡಾ। ರಾಜಶ್ರೀಯವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಮಾಂಗಲ್ಯಂ ತಂತುನಾನೇನ ....

ಕುಂಜಾರುಗಿರಿಯಲ್ಲಿರುವ ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಎಲ್ಲೂರು ಅಚ್ಯುತ್ತರಾಯರ ಪುತ್ರ **ಮಧುಸೂದನ** ಹಾಗೂ ರಿಪ್ಪನ್ ಪೇಟೆಯ ಶ್ರೀಮತಿ ನಾಗಮ್ಮ ಮತ್ತು ಶ್ರೀ ಗಣೇಶ್‌ರಾಯರ ಪುತ್ರಿ **ಅನಸೂಯ** ಇವರ ವಿವಾಹವು ದಿನಾಂಕ 25-04-2013ರಂದು ಕಮಲಶಿಲೆಯ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವರ ಸನ್ನಿಧಿಯಲ್ಲಿ ನೆರವೇರಿತು.

★★★★

ಕೆಮ್ಮಣ್ಣು ಶ್ರೀಮತಿ ಸುಲೋಚನಾ ಮತ್ತು ಶ್ರೀ ಕೆ.ಸತೀಶ್‌ಕುಮಾರ್‌ರ ಪುತ್ರ **ಶಿಶಿರ್.ಕೆ**. ಹಾಗೂ ಇನ್ನಾ ಶ್ರೀಮತಿ ಗೀತಾ ಮತ್ತು ಶ್ರೀ ನಾರಾಯಣ್‌ರಾಯರ ಪುತ್ರಿ **ಚೇತನಾ** ಇವರ ವಿವಾಹವು ದಿನಾಂಕ 01-05-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಸಕ್ಕಟ್ಟು ಶ್ರೀಮತಿ ಮತ್ತು ಶ್ರೀ ಸದಾಶಿವರಾಯರ ಪುತ್ರ **ಕೃಷ್ಣಪ್ರಸಾದ** ಹಾಗೂ ಪಡುಬೆಳ್ಳೆಯ ಶ್ರೀಮತಿ ಶಾರದಾ ಮತ್ತು ಶ್ರೀ ಮಾಧವರಾಯರ ಪುತ್ರಿ **ರಮ್ಯ** ಇವರ ವಿವಾಹವು ದಿನಾಂಕ 12-05-2013 ರಂದು ಉಡುಪಿ ರಥಬೀದಿಯ ಶ್ರೀಕೃಷ್ಣ ಸಭಾಮಂದಿರದಲ್ಲಿ ನೆರವೇರಿತು.

## ಉಪನಯನ

### ವಲ್ಲಭ್

ಉದ್ಯಾವರ ಶ್ರೀಮತಿ ಶುಭಾ ಮತ್ತು ಶ್ರೀ ವಿಜಯಚಂದ್ರ ಇವರ ಪುತ್ರ ವಲ್ಲಭ್‌ನ ಬ್ರಹ್ಮೋಪದೇಶವು ದಿನಾಂಕ 28-04-2013 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

### ವಿವೇಕ್

ಕುಂಜಾರುಗಿರಿಯ ಶ್ರೀಮತಿ ಸುಮನಾ ಮತ್ತು ಶ್ರೀ ಅರುಣ್ ರಾವ್ ಇವರ ಪುತ್ರ ವಿವೇಕ್‌ನ ಬ್ರಹ್ಮೋಪದೇಶವು ದಿನಾಂಕ 28-04-2013 ರಂದು ಕುಂಜಾರುಗಿರಿಯಲ್ಲಿರುವ ಸ್ವಗೃಹದಲ್ಲಿ ನೆರವೇರಿತು.

★★★★

### ಆದಿತ್ಯ

ನಂದಳಿಕೆ ಶ್ರೀಮತಿ ಮತ್ತು ಶ್ರೀ ಮಹೇಶ್ ಶಾನ್‌ಭಾಗ್ ಇವರ ಪುತ್ರ ಆದಿತ್ಯನ ಬ್ರಹ್ಮೋಪದೇಶವು ದಿನಾಂಕ 12-05-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

### ರೂಪೇಶ್

ಶ್ರೀಮತಿ ಅಶ್ವಿನಿ ಮತ್ತು ಶ್ರೀ ದೀಪಕ್, ಕುಡುಪು ಇವರ ಪುತ್ರ ರೂಪೇಶ್‌ನ ಬ್ರಹ್ಮೋಪದೇಶವು ದಿನಾಂಕ 12-05-2013ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿತು

★★★★

### ಚಿ। ತುಷಾರ

ಶ್ರೀಮತಿ ಮತ್ತು ಶ್ರೀ ಹರೀಶ್ ತಾಳೆಪ್ಪಾಡಿ ಇವರ ಪುತ್ರ ತುಷಾರನ ಬ್ರಹ್ಮೋಪದೇಶವು ತಾ.28-04-2013ರಂದು ಬೊಳುವಾರು ಶ್ರೀ ವಿಶ್ವಕರ್ಮ ಸಭಾಭವನದಲ್ಲಿ ನೆರವೇರಿತು.

## ಶುಭ ಜನನ

ಮಂಗಳೂರು ಕೊಲ್ಯಾ ಶ್ರೀ ಗಣೇಶ್ ರಾವ್ ಹಾಗೂ ಶ್ರೀಮತಿ ಅಪರ್ಣಾ ರಾವ್ ದಂಪತಿಗಳಿಗೆ ದಿನಾಂಕ 09-03-2013ರಂದು ಹೆಣ್ಣು ಶಿಶುವಿನ ಜನನ.

★★★★

ಪಡುಬಿದ್ರೆ ಗಣೇಶ್ ಶಾನುಭಾಗ್‌ರ ಪುತ್ರ ಶ್ರೀ ಅರುಣ ಹಾಗೂ ಶ್ರೀಮತಿ ಸೌಮ್ಯರಿಗೆ ದಿನಾಂಕ 24-04-13ರಂದು ಅವಳಿ ಗಂಡು ಮಕ್ಕಳ ಜನನ.

★★★★

ಬೆಂಗಳೂರಿನ ಶ್ರೀ ಅನಂತ ಕುಮಾರ ಕಾರ್ಕಡ ಹಾಗೂ ಶ್ರೀಮತಿ ಅಶ್ವಿನಿ ದಂಪತಿಗಳಿಗೆ ದಿನಾಂಕ 01-05-2013 ರಂದು ಹೆಣ್ಣು ಮಗುವಿನ ಶುಭ ಜನನ.

★★★★

ಪ್ರಸ್ತುತ ಸೌದಿಅರೇಬಿಯಾದಲ್ಲಿ ಉದ್ಯೋಗದಲ್ಲಿರುವ ಪರ್ಕಳ ಕುಕ್ಕುದಕಟ್ಟೆಯ ಕುರಯ ರಾಮಮೂರ್ತಿ ಹಾಗೂ ಸ್ವಾತಿಕಾ ದಂಪತಿಗಳಿಗೆ ದಿನಾಂಕ 04-05-2013 ರಂದು ಹೆಣ್ಣು ಮಗುವಿನ ಶುಭ ಜನನ.

★★★★

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾದ ಚಿಟ್ಪಾಡಿ ಎಸ್. ದಿವಾಕರ್ ರಾವ್ ಅವರ ಪುತ್ರ ಸಂತೋಷ್ ಹಾಗೂ ಮಾಧವಿಯವರಿಗೆ ತಾ.6-5-2013ರಂದು ಹೆಣ್ಣು ಮಗುವಿನ ಶುಭ ಜನನ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಹೈಪೋಥೈರಾಯ್ಡ್ಸಂ (HYPOTHYROIDISM) ಎಂದರೇನು? ಇದರ ಚಿಕಿತ್ಸೆ ಹೇಗೆ?**

**ಉತ್ತರ :** ನಮ್ಮ ದೇಹದಲ್ಲಿ ಅನೇಕ ನಿರ್ನಾಳ ಗ್ರಂಥಿಗಳಿವೆ. ಈ ನಿರ್ನಾಳ ಗ್ರಂಥಿಗಳು ನಮ್ಮ ದೇಹವು ಸುಗಮವಾಗಿ ಕಾರ್ಯನಿರ್ವಹಿಸಲು ಅತೀ ಅಗತ್ಯವಾದ ಕೆಲವು ಪದಾರ್ಥಗಳನ್ನು ಸ್ರವಿಸುತ್ತವೆ. ಈ ಪದಾರ್ಥವನ್ನು ಹಾರ್ಮೋನ್ ಎಂದು ಕರೆಯುತ್ತೇವೆ. ಉದಾಹರಣೆಗೆ ಮೇದೋಜೀರಕ ಗ್ರಂಥಿಯು ಸ್ರವಿಸುವ ಇನ್ಸುಲಿನ್ ಎಂಬ ಹಾರ್ಮೋನ್. ಈ ಇನ್ಸುಲಿನ್‌ನ ಕೊರತೆಯಾದರೆ ದೇಹವು ರಕ್ತದಲ್ಲಿನ ಸಕ್ಕರೆಯ ಅಂಶವನ್ನು ಬಳಸಿಕೊಳ್ಳಲು ಅಸಮರ್ಥವಾಗುವುದು. ಹಾಗೆಯೇ ಹೊಟ್ಟೆಯಲ್ಲಿ ಅಡ್ರಿನಲ್ ಎಂಬ ಇನ್ನೊಂದು ಗ್ರಂಥಿಯು ಕೋರ್ಟಿಸಾಲ್ ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಈ ಹಾರ್ಮೋನ್ ನಮ್ಮ ದೇಹದಲ್ಲಿ ಉಪ್ಪಿನ ಅಂಶವನ್ನು ಕಾಯ್ದುಕೊಳ್ಳಲು ಅತೀ ಅಗತ್ಯ. ಹಾಗೆಯೇ ಗಂಡು ಹುಡುಗರಲ್ಲಿ ಟೆಸ್ಟೋಸ್ಟಿರಾನ್ ಎಂಬ ಹಾರ್ಮೋನು ಹುಡುಗಿಯರಲ್ಲಿ ಈಸ್ಟ್ರೋಜೆನ್ ಎಂಬ ಹಾರ್ಮೋನೂ ಅವರು ಪ್ರಾಯಕ್ಕೆ ಬಂದಾಗ ಅವರ ದೈಹಿಕ ಬೆಳವಣಿಗೆಯನ್ನು ನಿರ್ದೇಶಿಸುತ್ತದೆ. ಅದೇ ರೀತಿ ಕುತ್ತಿಗೆಯಲ್ಲಿ ಧ್ವನಿಪೆಟ್ಟಿಗೆಗೆ ಅಂಟಿಕೊಂಡು ಇರುವ ಥೈರೋಡ್ ಎಂಬ ಗ್ರಂಥಿಯು ಥೈರೋಕ್ಸಿನ್ ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಈ ಹಾರ್ಮೋನಿನ ಕೊರತೆಯಾದರೆ ಆ ಕಾಯಿಲೆಯನ್ನು ಹೈಪೋತೈರೋಯ್ಡೈಡಿಸಂ (HYPOTHYROIDISM)ಎಂದುಕರೆಯುತ್ತೇವೆ.

ಥೈರೋಕ್ಸಿನ್ಹಾರ್ಮೋನನ್ನು ಥೈರೋಯ್ಡ್ ಗ್ರಂಥಿಯು ಆಹಾರದಲ್ಲಿರುವ ಅಯೋಡಿನ್ ಎಂಬ ಮೂಲವಸ್ತುವನ್ನು ಬಳಸಿ ಉತ್ಪಾದಿಸುತ್ತದೆ. ಹುಟ್ಟಿನಿಂದ ಆರಂಭಿಸಿ ಕೊನೆಯ ತನಕ ನಮ್ಮ ದೇಹದ ಪ್ರತಿಯೊಂದು ಬೆಳವಣಿಗೆಗೂ (ಮಾನಸಿಕಹಾಗೂದೈಹಿಕ) ಈ ಹಾರ್ಮೋನ್ ಅತೀ ಅವಶ್ಯ. ಹುಟ್ಟಿನಿಂದಲೇ ಈ ಹಾರ್ಮೋನು ಇಲ್ಲವಾದರೆ ಇಪ್ಪತ್ತು ವರ್ಷ ಪ್ರಾಯವಾದರೂ ಆ ರೋಗಿಯು ಎರಡು ವರ್ಷ ಪ್ರಾಯದವನಂತೆ ಕಾಣಿಸುತ್ತಾನೆ. ಅಷ್ಟು ಮಾತ್ರವಲ್ಲದೆ ನಮ್ಮ ದೇಹದ ಎಲ್ಲಾ ಅಂಗಾಂಗಗಳು ಚಟುವಟಿಕೆಯಿಂದಿರುವಂತೆ ಈ ಹಾರ್ಮೋನು ಚುರುಕು ಮುಟ್ಟಿಸಿ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಸುತ್ತದೆ. ಈ ಹಾರ್ಮೋನಿನ ಕೊರತೆಯಾದರೆ ಹೃದಯದ ಬಡಿತ ನಿಧಾನವಾಗುವುದು, ಮೆದುಳಿನಲ್ಲಿ ಚುರುಕುತನ ಮಾಯವಾಗುವುದು, ಕೊಬ್ಬು ದೇಹದಲ್ಲಿ ಕರಗುವುದು ನಿಧಾನವಾಗಿ ಕೊಲೆಸ್ಟಿರಾಲ್‌ನ ಮಟ್ಟಹೆಚ್ಚುವುದು. ಕಿಡ್ನಿಯೂ ತನ್ನ ಕೆಲಸದಲ್ಲಿ ಉದಾಸೀನ ಮಾಡೀತು. ಹೀಗೆ ನಮ್ಮ ದೇಹವು ಸುಸ್ಥಿತಿಯಲ್ಲಿರಬೇಕಾದರೆ ಈ ಹಾರ್ಮೋನ್ ಅತ್ಯಗತ್ಯ. ಮೆದುಳಿನಲ್ಲಿರುವ ಪಿಟ್ಯುಟರಿ ಎಂಬ ಗ್ರಂಥಿಯು ತಾನು ಸ್ರವಿಸುವ ಥೈರೋಟ್ರೋಪಿನ್ಸ್ಟಿಮುಲೇಟಿಂಗ್ಹಾರ್ಮೋನ್(TSH) ಎಂಬ ಇನ್ನೊಂದು ಹಾರ್ಮೋನ್‌ನ ಮೂಲಕ ಈ ಹಾರ್ಮೋನನ್ನು ಥೈರೋಯ್ಡ್ ಗ್ರಂಥಿಯು ಸ್ರವಿಸುವಂತೆ ಪ್ರೇರೇಪಿಸುತ್ತದೆ. ಈ ಹಾರ್ಮೋನಿಗೆ ಥೈರಾಯ್ಡ್ ಗ್ರಂಥಿಯನ್ನು ಅದು ಥೈರಾಕ್ಸಿನ್ ಹಾರ್ಮೋನನ್ನು ಸ್ರವಿಸುವಂತೆ ಪ್ರೇರೇಪಿಸುವುದೇ ಕೆಲಸ. ಒಂದು ವೇಳೆ ರಕ್ತದಲ್ಲಿ ಥೈರಾಯ್ಡ್ ಹಾರ್ಮೋನಿನ ಮಟ್ಟ ಕಡಿಮೆಯಾದರೆ ಪಿಟ್ಯುಟರಿ ಗ್ರಂಥಿಯು ಹೆಚ್ಚು ಹಾರ್ಮೋನನ್ನು ಸ್ರವಿಸಿ ಥೈರೋಯ್ಡ್ ಗ್ರಂಥಿಯನ್ನು ಹೆಚ್ಚು ಹಾರ್ಮೋನನ್ನು ಸ್ರವಿಸುವಂತೆ ಪ್ರೇರೇಪಿಸುತ್ತದೆ.

ಮಣ್ಣು ಹಾಗೂ ನೀರಿನಲ್ಲಿ ಯಥೇಚ್ಛವಾಗಿರುವ ಅಯೋಡಿನ್ ಅನ್ನು ಉಪಯೋಗಿಸಿ ಬೆಳೆದ ಸಸ್ಯಾಹಾರ ಅಥವಾ ಮಾಂಸಾಹಾರದಲ್ಲಿ ಸಾಕಷ್ಟು ಅಯೋಡಿನ್ ಇರುತ್ತದೆ. ಆದರೆ ಕೆಲವು ಕಡೆಯ ಮಣ್ಣು ಹಾಗೂ ನೀರಿನಲ್ಲಿ ಅಯೊಡಿನ್ ಅಂಶ ಕಡಿಮೆ ಇದ್ದರೆ ಆಗ ತಿನ್ನುವ ಆಹಾರದಲ್ಲಿ ಸಾಕಷ್ಟು ಅಯೋಡಿನ್ ಇರದೆ ಕೊರತೆ ಉಂಟಾಗುತ್ತದೆ. ಹೀಗೆ ಆಹಾರದಲ್ಲಿ ಅಯೋಡಿನ್ ಇಲ್ಲದೆ ಥೈರಾಯ್ಡ್ ಹಾರ್ಮೋನಿನ ಉತ್ಪಾದನೆಗೆ ಕಚ್ಚಾವಸ್ತು ಕಡಿಮೆಯಾಗಿ ಹಾರ್ಮೋನಿನ ಕೊರತೆಯಾಗುವುದು ಅತ್ಯಂತ ಸಾಮಾನ್ಯ ಕಾರಣ. ಅಯೊಡಿನ್‌ನ ಕೊರತೆ ಮಾತ್ರವಲ್ಲದೆ ಮಾನಸಿಕ ಖಾಯಿಲೆಗೆ ಬಳಸುವ ಹಾಗು ಕೆಲವು ಹೃದಯದ ಕಾಯಿಲೆಗೆ ಬಳಸುವ ಔಷಧಗಳು ಥೈರಾಯ್ಡ್ ಗ್ರಂಥಿಯ ಕ್ಷಮತೆಯನ್ನು ಕಡಿಮೆ ಮಾಡಿ ಹಾರ್ಮೋನಿನ ಕೊರತೆ ಉಂಟು ಮಾಡುತ್ತವೆ. ಅದೇ ರೀತಿ ಥೈರಾಯ್ಡ್ ಗ್ರಂಥಿಯ ಊತಗಳೂ() ಅದರ ಕ್ಷಮತೆಯನ್ನು ಕಡಿಮೆಮಾಡಬಹುದು, ಹಾಗೆಯೇ ಯಾವುದಾದರೊಂದು ಕಾರಣಕ್ಕೆ ಶಸ್ತ್ರಚಿಕಿತ್ಸೆ ಮಾಡಿ ಥೈರಾಯ್ಡ್ ಗ್ರಂಥಿಯನ್ನು ತೆಗೆದಿದ್ದರೆ ಆಗ ಈ ಹಾರ್ಮೋನಿನ ಕೊರತೆ ಉಂಟಾಗಬಹುದು. ಇನ್ನು ಕೆಲವೊಮ್ಮೆ ಕೆಲವು ಥೈರಾಯ್ಡ್ ಖಾಯಿಲೆಗಳಿಗೆ ರೇಡಿಯೋ ಅಯೋಡಿನ್ ಎಂಬ ವಿಕಿರಣ ಸೂಸುವ ಔಷಧಿಯ ಚಿಕಿತ್ಸೆ ಮಾಡಿರುತ್ತಾರೆ. ಇವರಲ್ಲೂ ಥೈರಾಯ್ಡ್ ಗ್ರಂಥಿ ಹಾರ್ಮೋನನ್ನು ಸಾಕಷ್ಟು ಸ್ರವಿಸದೇ ಇರಬಹುದು. ಇನ್ನು ಕೆಲವೊಮ್ಮೆ ಸಣ್ಣ ಮಕ್ಕಳಲ್ಲಿ ಥೈರಾಯ್ಡ್ ಗ್ರಂಥಿಯ ಬೆಳವಣಿಗೆ ಸರಿಯಾಗಿರದೆ ಅಥವಾ ಕೆಲವು ಕಿಣ್ವ()ಗಳ ಕೊರತೆಯಿಂದಾಗಿ ಥೈರಾಯ್ಡ್ ಗ್ರಂಥಿಯು ಸಾಕಷ್ಟು ಹಾರ್ಮೋನ್ ಸ್ರವಿಸದೇ ಇರಬಹುದು. ಗರ್ಭಿಣಿಯರಲ್ಲಿ ಹಾಗೂ ಹೆರಿಗೆಯ ನಂತರ ಈ ಕೊರತೆ ಸಾಮಾನ್ಯ.

ಮೆದುಳಿನ ಹಾಗೂ ಪಿಟ್ಯುಟರಿ ಗ್ರಂಥಿಯ ಖಾಯಿಲೆಗಳಿಂದಲೂ ಹಾಗೂ ಅಧಿಕ ಮಾನಸಿಕ ಒತ್ತಡದಿಂದಲೂ ನ ಸ್ರಾವ ಕಡಿಮೆಯಾಗಿ ಥೈರಾಯ್ಡ್ ಗ್ರಂಥಿಗೆ ಹಾರ್ಮೋನ್ ಸ್ರವಿಸುವಂತೆ ಪ್ರೇರೇಪಣೆ ಬರದೆ ಥೈರಾಯ್ಡ್ ಹಾರ್ಮೋನಿನ ಕೊರತೆ ಉಂಟಾಗಬಹುದು.

ಥೈರಾಯ್ಡ್ ಹಾರ್ಮೋನಿನ ಕೊರತೆ ಯಾವ ವಯಸ್ಸಿನಲ್ಲೂ ಯಾರಲ್ಲೂ ಆಗಬಹುದು. ಸಣ್ಣ ಪ್ರಾಯದಲ್ಲಿ ಕೊರತೆಯಾದರೆ ದೇಹದ ಬೆಳವಣಿಗೆ ಕುಂಠಿತವಾಗುತ್ತದೆ. ಇನ್ನು ದೊಡ್ಡವರಲ್ಲಿ ಈ ಹಾರ್ಮೋನಿನ ಕೊರತೆಯಿದ್ದರೆ ಬುದ್ದಿಶಕ್ತಿ ಮಂದವಾಗುವುದು, ಆಲಸ್ಯ, ಮುಖ ಕಾಲುಗಳಲ್ಲಿ ಊತಬರುವುದು, ತೂಕ ಜಾಸ್ತಿಯಾಗುವುದು, ಚರ್ಮ ದೊರಗಾಗುವುದು, ಕೈಕಾಲುಗಳು ಜೋಮುಹಿಡಿಯುವುದು, ಬೇಗನೆ ಸುಸ್ತಾಗುವುದು, ಮಾತನಾಡುವಾಗ ತೊದಲುವುದು, ಗೊಗ್ಗರ ಸ್ವರಬರುವುದು, ಕೂದಲುದುರುವುದು, ಮುಟ್ಟು ಹಿಂದು ಮುಂದಾಗುವುದು ಈ ಎಲ್ಲಚಿಹ್ನೆಗಳು ಇರುತ್ತವೆ (ಕೊರತೆಯ ತೀವ್ರತೆಯನ್ನು ಅವಲಂಬಿಸಿ). ಕೆಲವು ರೋಗಿಗಳಲ್ಲಿ ಕುತ್ತಿಗೆಯ ಮುಂಭಾಗದಲ್ಲಿ ಥೈರಾಯ್ಡ್ ಗ್ರಂಥಿ ಊದಿ ಕೊಂಡಿರುವುದನ್ನು()ಕಾಣಬಹುದು. ಸಂಶಯವಿದ್ದಾಗ ರಕ್ತದಲ್ಲಿ ಥೈರಾಯ್ಡ್ ಹಾರ್ಮೋನಿನ ಮಟ್ಟ ಅಳತೆ ಮಾಡಿ ಈ ಖಾಯಿಲೆಯಿರುವುದನ್ನು ಸುಲಭವಾಗಿ ಪತ್ತೆಹಚ್ಚಬಹುದು. ಥೈರಾಯ್ಡ್ ಹಾರ್ಮೋನ್‌ನ ಮಟ್ಟ ಕಡಿಮೆಯಿದ್ದರೆ ಆಗ ಮಟ್ಟ ಮಾಮೂಲಿಗಿಂತ ಹೆಚ್ಚಿರುತ್ತದೆ.

ಕೃತಕವಾಗಿ ತಯಾರಿಸಿದ ಥೈರಾಯ್ಡ್ ಹಾರ್ಮೋನನ್ನು ಸೇವಿಸುವುದೇ ಈ ಖಾಯಿಲೆಗೆ ಮದ್ದು. ಥೈರೋಕ್ಸಿನ್ ಹಾರ್ಮೋನ್‌ನ ಗುಳಿಗೆಗಳು ವಿವಿಧ ಪ್ರಮಾಣದಲ್ಲಿ ಲಭ್ಯವಿವೆ. ವೈದ್ಯರ ಸಲಹೆಯ ಮೇರೆಗೆ ಈ ಔಷಧವನ್ನು ಸೇವಿಸಿದರೆ ಸ್ವಲ್ಪ ದಿನಗಳಲ್ಲೇ ಎಲ್ಲಾ ಚಿಹ್ನೆಗಳು ಮಾಯವಾಗುತ್ತವೆ. ಆದರೆ ಹೆಚ್ಚಿನ ರೋಗಿಗಳಿಗೆ ಈ ಚಿಕಿತ್ಸೆ ತುಂಬಾ ವರ್ಷದವರೆಗೆ, ಕೆಲವೊಮ್ಮೆ ಜೀವಮಾನ ಪೂರ್ತಿಬೇಕಾಗುತ್ತದೆ. ಥೈರಾಯ್ಡ್ ಹಾರ್ಮೋನಿನ ಗುಳಿಗೆಯನ್ನು ಯಾವಾಗಲೂ ಆಹಾರ ಸೇವಿಸುದಕ್ಕಿಂತ ಒಂದು ಗಂಟೆ ಮೊದಲು ಸೇವಿಸಬೇಕು ಹಾಗೂ ಈ ತೊಂದರೆಯಿರುವವರು ಬಟಾಣಿ, ಕ್ಯಾಬೇಜ್, ನವಿಲು ಕೋಸು, ಸಾಸಿಮೆಗಳನ್ನು ಆದಷ್ಟು ಕಡಿಮೆ ಸೇವಿಸಬೇಕು. ಅಯೋಡಿನ್ ಉಕ್ತ ಉಪ್ಪನ್ನೇ ಅಡಿಗೆಗೆ ಬಳಸಿದರೆ ಅಯೋಡಿನ್ ಕೊರತೆಯಿಂದಾಗುವ ಈ ಖಾಯಿಲೆಯನ್ನು ತಡೆಗಟ್ಟಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಸಂಧ್ಯಾವಂದನಾ ಶಿಬಿರ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇವರ ವತಿಯಿಂದ ತಾ.06-05-2013ರ ಸೋಮವಾರ ಸಂಜೆ ಗಂಟೆ 5-30ಕ್ಕೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ 5 ದಿನಗಳ ಕಾಲ ನಡೆಯಲಿರುವ ಸಂಧ್ಯಾವಂದನಾ ಶಿಬಿರವನ್ನು ಪ್ರಾರಂಭಿಸಲಾಯಿತು. ಸಂಘದ ಅಧ್ಯಕ್ಷರಾದ ಪ್ರಫುಲ್ಲಚಂದ್ರ ರಾವ್ ಹಾಗೂ ಇತರ ಸದಸ್ಯರು ಮತ್ತು ಮಕ್ಕಳು ಹಾಗೂ ಹಿರಿಯರು ಆಗಮಿಸಿ ಇದರ ಪ್ರಯೋಜನವನ್ನು ಪಡೆದರು. ಪ್ರತೀ ದಿನ ಸಂಜೆ 5-30ರಿಂದ 7-00 ಗಂಟೆಯವರೆಗೆ ನಡೆಯುತ್ತಿದ್ದ ಸಂಧ್ಯಾವಂದನಾ ವಿಧಿಯ ತರಬೇತಿ ಕಾರ್ಯಕ್ರಮವು ತಾ.10-05-2013ರಂದು ಕೊನೆಗೊಂಡಿತು. ಆ ದಿನ ಸಂಜೆ ಮುಕ್ತಾಯ ಸಮಾರಂಭದಲ್ಲಿ ಕಾರ್ಯದರ್ಶಿಯವರಾದ ಅರವಿಂದ ಕುಮಾರ್ ಸಂಘದಲ್ಲಿ ಪ್ರಾಯೋಗಿಕವಾಗಿ ಈ ಬಾರಿ ಪ್ರಾರಂಭಿಸಿದ ಶಿಬಿರದ ಬಗ್ಗೆ ತಿಳಿಸಿ ಶಿಬಿರಾರ್ಥಿಗಳಿಗೆ ಹಾಗೂ ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಯವರಿಗೆ ಧನ್ಯವಾದವನ್ನು ನೀಡಿದರು. ಹಿರಿಯರಾದ ಮ.ನ.ಹೆಬ್ಬಾರ್ ಹಾಗೂ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಶಿಬಿರದ ಪ್ರಯೋಜನವನ್ನು ವಿವರಿಸಿದರು. ಗುರುಗಳಾದ ವಾಗೀಶ ಶಾಸ್ತ್ರಿಯವರು ಸಂಘಕ್ಕೆ ಕೃತಜ್ಞತೆಯನ್ನು ಅರ್ಪಿಸಿ ಮುಂದೆ ಅಕ್ಟೋಬರ್ ರಜೆ ಅಥವಾ ಇತರೆ ದಿನಗಳಲ್ಲಿ ಇಂತಹ ಶಿಬಿರಗಳನ್ನು ನಡೆಸುವುದು ಉತ್ತಮ ಎಂದು ಸಲಹೆ ನೀಡಿದರು. ಕೊನೆಯಲ್ಲಿ ಕಾರ್ಯದರ್ಶಿಯವರು ಫಲಪುಷ್ಪಗಳೊಂದಿಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರನ್ನು ಗೌರವಿಸಿದರು.

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಧಂತ್ಯುತ್ಸವ




ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಲ್ಲಿ ಇತ್ತೀಚೆಗೆ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸ್ವಾಮಿಗಳ ವರ್ಧಂತ್ಯುತ್ಸವವನ್ನು ವಿಜೃಂಬಣೆಯಿಂದ ಆಚರಿಸಲಾಯಿತು. ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ, ಲಲಿತ ಸಹಸ್ರಾಮ ಹಾಗೂ ಶ್ರೀ ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ನಡೆದ ಬಳಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ನಡೆಸಲಾಯಿತು. ನಂತರ ಶ್ರೀ ಟಿ. ಮೋಹನ ರಾವ್‌ರವರು ಗುರುಗಳ ದೈವಿಕ ಶಕ್ತಿ ಹಾಗೂ ರಚಿಸಿದ ಗ್ರಂಥಗಳ ಬಗ್ಗೆ ತಿಳಿಸಿದರೆ ಶ್ರೀ ಸಭಾದ ಅಧ್ಯಕ್ಷ ಸಿ. ಎಸ್. ರಾವ್‌ರವರು ಶ್ರೀಗಳ ಒಡನಾಟದಲ್ಲಿ ಅವರು ಕಂಡುಕೊಂಡ ವಿಶೇಶತೆಗಳ ಬಗ್ಗೆ ತಿಳಿಸಿದರು. ಶ್ರೀ ಜಯಪ್ರಕಾಶ ಮತ್ತು ಶೀಲತ ದಂಪತಿಗಳು ಸತ್ಯನಾರಾಯಣ ಪೂಜೆ ನಡೆಸಿದರೆ ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಮಂಗಳಾರತಿ, ಪ್ರಸಾದ ವಿತರಣೆ, ಮತ್ತು ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಚಿತ್ರ ñ ರಘುವೀರ ಪೆರ್ಡೂರ್** **ವರದಿ : ಪಿ. ಶ್ರೀಕಾಂತ ರಾವ್**

## ವಧೂವರರ ಮಾಹಿತಿಗಾಗಿ....

ನಮ್ಮ ಸಮಾಜದ ವಧೂವರರ ಮಾಹಿತಿಗಾಗಿ ಈ ಇ-ಮೇಲ್‌ನ್ನು ಸಂಪರ್ಕಿಸಿರಿ.
gbicsm@gmail.com ಅಥವಾ belle.d.v@gmail.com
ಫೋನ್ : 09242204848
ಹೆಚ್ಚಿನ ಮಾಹಿತಿಗಾಗಿ ಬೆಳ್ಳೆ ದೇವರಾವ್ ಇವರನ್ನು ಸಂಪರ್ಕಿಸಬಹುದು.




## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.28-05-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.15-05-2013 ಶುದ್ಧ ಪಂಚಮಿ ಹಾಗೂ ತಾ.29-05-2013ರಂದಂದು ಬಹುಳ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.27-05-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

*Krishna Rao*
Ph : 2520652
Mob. : 9902029048
KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org